# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ
# ಬೈಲಾಗಳು–2018

---

1 ವಿಷಯಸೂಚಿ

**1.ಉದ್ದೇಶ: ........ 3**

**2.ಪೂರ್ವಭಾವಿ: ........ 3**

2.1.ಸಣ್ಣ ಶೀರ್ಷಿಕೆ, ವ್ಯಾಪ್ತಿ ಮತ್ತು ಆರಂಭ ........ 3

2.2.ಧ್ಯೇಯಗಳು ಮತ್ತು ಸಾಧ್ಯತೆ ........ 3

2.3.ನಿರೂಪಣೆಗಳು ........ 4

2.4.ಜಾಹೀರಾತುಗಳ ವಿಧಗಳು ........ 5

2.5.ಪ್ರದರ್ಶನದ ಪ್ರಮಾಣಗಳು(ಯೂನಿಟ್ ಗಳು) ........ 8

**3.ಚಿತ್ರನಕ್ಷೆ ಪರವಾನಗಿಗಳು(ಅನುಮತಿಗಳು) ........ 9**

3.1.ಚಿತ್ರದ ಅಳತೆಗಳು ........ 9

3.2.ಸ್ವಯಂನಿಲ್ಲುವ ಚಿತ್ರನಕ್ಷೆಗಳು ........ 10

3.3.ಬಟ್ಟೆ ಮೇಲ್ಛಾವಣಿಗಳು, ಚಿತ್ರಚಾವಣಿಗಳು(ಮೇಲ್ಕಟ್ಟು), ಡೇರೆಗಳು ........ 11

3.4.ಪ್ರಕ್ಷೇಪ ಚಿತ್ರನಕ್ಷೆಗಳು ........ 13

3.5.ಕಿಟಕಿ ಚಿತ್ರನಕ್ಷೆಗಳು ........ 14

3.6.ತಾತ್ಕಾಲಿಕ ಕಂಬದ ಚಿತ್ರನಕ್ಷೆಗಳು ........ 14

3.7.ವಿದ್ಯುನ್ಮಾನ ಸಂದೇಶ ಚಿಹ್ನೆಗಳು ........ 14

3.8.ಗೋಡೆ ಚಿತ್ರನಕ್ಷೆಗಳು ........ 15

3.9.ಛಾವಣಿ-ಗೋಡೆ ಚಿತ್ರನಕ್ಷೆಗಳು ........ 16

3.10.ವಾಹನ ಚಿತ್ರನಕ್ಷೆಗಳು ........ 17

3.11.ಪ್ರಾಯೋಜಿತ ಜಾಹೀರಾತುಗಳು ........ 17

**4.ವಿನ್ಯಾಸ ಮತ್ತು ನಿರ್ಮಾಣ ಮಾನದಂಡಗಳು ........ 18**

**5.ಪರಂಪರೆ ಪ್ರದರ್ಶನ ಪರಿಗಣನೆಗಳು ........** Error! Bookmark not defined.

**6.ದೀಪವ್ಯವಸ್ಥೆ ಮತ್ತು ಕ್ರಿಯಾಶೀಲ ದೀಪ ಪ್ರದರ್ಶನಗಳು ........ 19**

**7.ನಿಷಿದ್ಧ ಚಿತ್ರನಕ್ಷೆಗಳು ........ 22**

**8.ಅನುಷ್ಠಾನ ........ 23**

**9.ಅನುಮತಿ ಅಗತ್ಯಗಳಿಂದ ರಿಯಾಯಿತಿಯಾದವುಗಳು ........ 24**

**10.ಅನುಮೋದನೆ ಪ್ರಕ್ರಿಯೆ ........ 27**

## 1.ಉದ್ದೇಶ:

ಸಾರ್ವಜನಿಕ ಮಾರ್ಗಹಕ್ಕುಗಳ (RoW) ಮೇಲೆ ಎಲ್ಲಾ ವಾಣಿಜ್ಯ ಬಿಲ್ಬೋರ್ಡ್ಗಳು ಮತ್ತು ಜಾಹೀರಾತು ಫಲಕಗಳನ್ನು ತಡೆಗಟ್ಟುವುದು ಹಾಗೂ ಇವುಗಳನ್ನು ಕ್ರಮ ಬದ್ಧವಾಗಿ ನಿಯಂತ್ರಿಸುವ ಸಲುವಾಗಿ ಹೊರಾಂಗಣ ಜಾಹೀರಾತು ಪ್ರದರ್ಶನ ಮತ್ತು ಸಾರ್ವಜನಿಕ ಸಂದೇಶಗಳ ಪ್ರದರ್ಶನ, ವಿನ್ಯಾಸ, ನಿರ್ಮಾಣ, ಅನುಷ್ಠಾನ ಮತ್ತು ನಿರ್ವಹಣೆಯ ಮೇಲೆ ಪ್ರಭಾವ ಬೀರುವ ಸಮಗ್ರ ನಿಯಂತ್ರಣ ವ್ಯವಸ್ಥೆಗಳನ್ನು ಸ್ಥಾಪಿಸುವುದು: ಅ) ಸಾರ್ವಜನಿಕ ಆರೋಗ್ಯ, ಸುರಕ್ಷೆ, ಮತ್ತು ಕ್ಷೇಮಾಭಿವೃದ್ಧಿಯನ್ನು ಪ್ರೋತ್ಸಾಹಿಸುವುದು ಹಾಗೂ ಸಂಚಾರಿ ಪ್ರಯಾಣ ಸುಲಭಗೊಳಿಸುವುದು. ಆ) ಸ್ಥಳೀಯ ಗುಣವಿಶೇಷತೆ ಮತ್ತು ಪರಿಸರವನ್ನು ಕಾಪಾಡುವುದು. ಇ) ಸಾರ್ವಜನಿಕ ಮಾರ್ಗಹಕ್ಕುಗಳಲ್ಲಿ ಮತ್ತು ಅದರ ಗುಣವಿಶೇಷತೆಯಲ್ಲಿನ ಸಾರ್ವಜನಿಕ ಹೂಡಿಕೆಯನ್ನು ಸಂರಕ್ಷಿಸುವುದು. ಈ) ಸಾರ್ವಜನಿಕ ಸಂವಹನವು ಕಣ್ಮನ ತಣಿಸುವಂತಹ ಸೌಂದರ್ಯವನ್ನು ಹೊಂದಿರುವುದಕ್ಕೆ ನೆರವಾಗುವುದು. ಉ) ಸಾರ್ವಜನಿಕ ಮಾರ್ಗಹಕ್ಕುಗಳಲ್ಲಿ ಪ್ರಯಾಣಿಸುತ್ತಿರುವ ವಾಹನಚಾಲಕರು ಮತ್ತು ಪಾದಚಾರಿಗಳಿಗೆ ಅಪಾಯಗಳನ್ನು ಕಡಿಮೆ ಮಾಡುವುದು. ಊ) ಅನುಸರಣೆಯನ್ನು ಸುಧಾರಿಸಿ, ಅನುಷ್ಠಾನವನ್ನು ಸುಲಭಗೊಳಿಸುವುದು.

## 2.ಪೂರ್ವಭಾವಿ:

### 2.1.ಸಣ್ಣ ಶೀರ್ಷಿಕೆ, ವ್ಯಾಪ್ತಿ ಮತ್ತು ಪ್ರಾರಂಭ

2.1.1. ಬೃ.ಬೆಂ.ಮ.ಪಾಲಿಕೆಯ ಜಾಹೀರಾತು ಬೈಲಾಗಳು 2006 ಮತ್ತು ತಿದ್ದುಪಡಿ ಜಾಹೀರಾತು ಬೈಲಾಗಳು 2012 ಇದನ್ನು ಹೊಸದಾಗಿ ಬೃ.ಬೆಂ.ಮ.ಪಾಲಿಕೆಯ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾಗಳು, 2018 ಇದರೊಂದಿಗೆ ಸಂಪೂರ್ಣವಾಗಿ ಬದಲಾಯಿಸಲಾಗಿದೆ.

2.1.2. ಬೃ.ಬೆಂ.ಮ.ಪಾಲಿಕೆಯ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾಗಳು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ ಕಾಯ್ದೆ 1976 ಇದರ ಅಧ್ಯಾಯ–II ರನ್ವಯ ಸರ್ಕಾರವು ಸೂಚಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರ ಪರಿಮಿತಿಯೊಳಗೆ ಅನ್ವಯಿಸುತ್ತದೆ.

2.1.3. ಬೃ.ಬೆಂ.ಮ.ಪಾಲಿಕೆಯ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾಗಳು ದಿನಾಂಕ-------ದಿಂದ ಜಾರಿಗೆ ಬರುತ್ತವೆ.

### 2.2.ಉದ್ದೇಶಗಳು ಮತ್ತು ವ್ಯಾಪ್ತಿಗಳು

ಬೃ.ಬೆಂ.ಮ.ಪಾಲಿಕೆಯ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾಗಳ ಉದೇಶಗಳು ಕೆಳಕಂಡಂತಿರುತ್ತವೆ:

2.2.1. ವಾಣಿಜ್ಯ ಜಾಹೀರಾತು ಫಲಕಗಳನ್ನು ಸಾರ್ವಜನಿಕ ಹಕ್ಕಿನ(RoW) ರೀತಿಯಲ್ಲಿ ನಿಷೇಧಿಸಲಾಗಿದೆ.

2.2.2.ಜಾಹೀರಾತು ಪ್ರದರ್ಶನಗಳಿಂದ ಏರ್ಪಡುವ ಗಮನಭಂಗವನ್ನು ಕಡಿಮೆ ಮಾಡುವ ಮೂಲಕ ಸಂಚಾರ ಸುರಕ್ಷತೆಯನ್ನು ಪ್ರೋತ್ಸಾಹಿಸುವುದು;

2.2.3.ಮಾರ್ಚ್ 11, 2016ರಂದು ಕರ್ನಾಟಕ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಅನ್ವಯ ಜಾಹೀರಾತು ಪ್ರದರ್ಶನಗಳಿಗೆ ಬಳಸುವ ವಸ್ತುಗಳು ಪರಿಸರಕ್ಕೆ ಹಾನಿಕರವಾದ ವಸ್ತುಗಳ ಬಳಕೆಯನ್ನು ನಿಷೇಧಿಸುವುದು;

2.2.4.ಆವಿಷ್ಕಾರ ಮತ್ತು ವಿನ್ಯಾಸದಲ್ಲಿ ಬದಲಾವಣೆಗಳನ್ನು ಪ್ರೋತ್ಸಾಹಿಸುವ ಮೂಲಕ ಚಿತ್ರಗಳಲ್ಲಿ ವೈಯಕ್ತಿಕ ಅಭಿವ್ಯಕ್ತಿ ಇರುವ ವ್ಯಾಪಾರಗಳಿಗೆ ಅನುಮತಿ ನೀಡುವುದು;

2.2.5. ಸುತ್ತ ಮುತ್ತಲಿನ ನೆರೆಹೊರೆಯವರಿಗೆ ಹೊಂದಿಕೆಯಾಗುವಂತಹ ಜಾಹೀರಾತುಗಳನ್ನು ನಿಯಂತ್ರಿಸುವುದು;

2.2.6. ಅಳತೆ, ಬಣ್ಣಗಳು ಮತ್ತು ಅನುಪಾತಗಳ ನಿಯಂತ್ರಣದ ಮೂಲಕ ಜಾಹೀರಾತುಗಳ ವಿನ್ಯಾಸ ಮತ್ತು ಜಾಹೀರಾತು ಪ್ರದರ್ಶನಗಳಲ್ಲಿ ಸ್ಪಷ್ಟತೆಯನ್ನು ನಿರ್ವಹಿಸುವುದು;

2.2.7. ಎಲ್ಲಾ ಅಧಿಕೃತ ಜಾಹೀರಾತು ಪ್ರದರ್ಶನಗಳಲ್ಲಿ ಪ್ರದರ್ಶಿಸಬೇಕಾಗಿರುವ ವಾಣಿಜ್ಯೇತರ ಚಿಹ್ನೆಗಳು ಮತ್ತು ಸಾರ್ವಜನಿಕ ಸಂದೇಶಗಳನ್ನು ಅನುಮತಿಸುವುದು.

## 2.3.ನಿರೂಪಣೆಗಳು

2.3.1.**"ಜಾಹೀರಾತುಗಳು"** ಎಂದರೆ, ವಾಣಿಜ್ಯಾರ್ಥದಲ್ಲಿ ಒಂದು ಉತ್ಪನ್ನ ಅಥವಾ ಸೇವೆಯನ್ನು ಪ್ರಚಾರ ಮಾಡುವುದಕ್ಕಾಗಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಭಿತ್ತಿಪತ್ರಗಳು, ಜಾಹೀರಾತು ಫಲಕಗಳು, ಜಾಹೀರಾತು ಬಿಲ್ಬೋರ್ಡ್ಗಳು, ಬ್ಯಾನರ್ಗಳು, ತಾತ್ಕಾಲಿಕ ಕಮಾನುಗಳು, ವಿದ್ಯುನ್ಮಾನ ಪ್ರದರ್ಶನ, ನಾಮಫಲಕಗಳು, ನಿರ್ದೇಶನ ಫಲಕಗಳು, ಕರಪತ್ರಗಳು, ಬಾವುಟಗಳು, ಬಲೂನ್‌ಗಳು ಅಥವಾ ಯಾವುದೇ ಇತರ ದೃಶ್ಯ ಅಥವಾ ಧ್ವನಿ ಮಾಧ್ಯಮದ ಮೂಲಕ ಪದಗಳು, ನಿರ್ದೇಶನ, ಸಂಕೇತಾಕ್ಷರಗಳು, ಅಕ್ಷರ, ಲೋಗೋ, ಚಿಹ್ನೆ, ಮಾದರಿ, ಚಿತ್ರ ಅಥವಾ ಇವೆಲ್ಲವುಗಳ ಸಂಯೋಜನೆಯೊಂದಿಗೆ ಪ್ರದರ್ಶಿಸಲಾಗುವ ಮತ್ತು ಈ ವಿವರಣೆಗಳಲ್ಲಿ ಪೂರೈಸಲಾಗಿರುವ ವರ್ಗಗಳಡಿ ಬರುವ ಯಾವುದೇ ಪ್ರದರ್ಶನ, ಉಪಕರಣ, ಅಥವಾ ಪ್ರತಿನಿಧಿತ್ವವನ್ನು ಒಳಗೊಂಡಿರುತ್ತದೆ. ಇದು, ಸ್ಥಳಗಳು, ಕಟ್ಟಡಗಳು ಮತ್ತು ಬಾಡಿಗೆ ವ್ಯಾಪಾರಗಳ ಹೆಸರನ್ನು ಸೂಚಿಸುವುದಕ್ಕಾಗಿ ಮತ್ತು ಗುರುತಿಸುವುದಕ್ಕಾಗಿ ಅನುಷ್ಠಾನಗೊಳಿಸಲಾಗಿರುವ ನಕ್ಷೆಚಿತ್ರಗಳನ್ನು ಒಳಗೊಳ್ಳುವುದಿಲ್ಲ.

2.3.2.**"ಏಜೆನ್ಸಿ"** ಅಂದರೆ, ಬೃ.ಬೆಂ.ಮ.ಪಾಲಿಕೆಯಲ್ಲಿ ಹೊರಾಂಗಣ ಜಾಹೀರಾತು ಏಜೆನ್ಸಿಯಾಗಿ ಸದಸ್ಯತ್ವ ಹೊಂದಿರುವ ವ್ಯಕ್ತಿ, ನೋಂದಾಯಿತ ಧಾರ್ಮಿಕ ಸಂಸ್ಥೆ, ಸಂಸ್ಥೆ, ಸಹಭಾಗಿತ್ವ ಸಂಸ್ಥೆ, ಅಥವಾ ಕಂಪನಿಗಳ ಕಾಯಿದೆ 1956 ಅಡಿ ಸ್ಥಾಪಿತವಾಗಿರುವ ಸಂಸ್ಥೆ.

2.3.3.**"ಪ್ರಾಧಿಕಾರ" ಅಂದರೆ, ನಗರಪಾಲಿಕೆಯ ಪರಿಮಿತಿಯೊಳಗೆ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಅನುಮೋದಿಸಲು, ಅನುಷ್ಠಾನಗೊಳಿಸಲು, ಮತ್ತು ನಿರ್ವಹಿಸುವುದಕ್ಕಾಗಿ ಇರುವ ಪಾಲಿಕೆಯ ಅಧಿಕೃತ ಮಂಡಳಿ.**

2.3.4.**"ಬೃ.ಬೆಂ.ಮ.ಪಾ."** ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಇದನ್ನು ಬೆಂಗಳೂರು ಮಹಾನಗರ ಪಾಲಿಕೆ ಎಂದು ಕರೆಯಲಾಗುತ್ತದೆ.

2.3.5. **"ಆಯುಕ್ತರು"** ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ(**ಬೃ.ಬೆಂ.ಮ.ಪಾ**) ಆಯುಕ್ತರು.

2.3.6. **"ಸ್ಪಷ್ಟತೆ" ಅಂದರೆ, ಓದುಗರು ಅದರಲ್ಲೂ ವಿಶೇಷವಾಗಿ ವಾಹನ ಚಾಲಕರು ಒಂದು ನಿರ್ದಿಷ್ಟ ವೇಗದಲ್ಲಿ ಪ್ರಯಾಣಿಸುತ್ತಿರುವಾಗ ವೈಯಕ್ತಿಕ ಅಕ್ಷರಗಳನ್ನು ಗುರುತಿಸಿ ಅದನ್ನು ಮತ್ತೊಂದು ಅಕ್ಷರದೊಂದಿಗೆ ಪ್ರತ್ಯೇಕವಾಗಿ ಗಮನಿಸುವುದಕ್ಕಾಗಿ ಸುಲಭವಾಗುವಂತಹ ಅಕ್ಷರ.**

2.3.7. **"ನಕಾರಾತ್ಮಕ ಸ್ಥಳ"** ಅಂದರೆ, ಒಂದು ಚಿತ್ರನಕ್ಷೆಯಲ್ಲಿ ಒಂದು ಅಕ್ಷರಾಂಕನ ಅಥವಾ ಚಿಹ್ನೆಯ ಸುತ್ತಲೂ ಇರುವ ಜಾಗ. ಒಂದು ಅಕ್ಷರ ಹಾಗು ನಕಾರಾತ್ಮಕ ಸ್ಥಳದ ಪ್ರಮಾಣ 40/60 ನಿಶ್ಚಿತ ಅನುಪಾತದಲ್ಲಿರುತ್ತದೆ.

2.3.8. **"ನಿಗದಿತ ಅರ್ಜಿ ನಮೂನೆ"** ಅಂದರೆ ಜಾಹೀರಾತನ್ನು ಅಳವಡಿಸಲು ಮತ್ತು ಪ್ರದರ್ಶಿಸಲು ಪಡೆಯಬೇಕಾದ ಪರವಾನಿಗೆಗಾಗಿ ಅಥವಾ ಈಗಾಗಲೇ ನೀಡಿರುವ

ಪರವಾನಿಗೆಯ ಅನುಮತಿಯನ್ನು ನವೀಕರಿಸುವುದಕ್ಕೆ ಆಯುಕ್ತರು ನಿಗಧಿಪಡಿಸಿರುವ ರೀತಿಯಲ್ಲಿ ಬೃ.ಬೆಂ.ಮ.ಪಾ.ಗೆ ಸಲ್ಲಿಸಲಾಗುವ ಯಾವುದೇ ಅರ್ಜಿ ನಮೂನೆ.

2.3.9. **"ಸಾರ್ವಜನಿಕ ಉದ್ಯಾನವನ"** ಅಂದರೆ ರಾಜ್ಯ ಸರ್ಕಾರ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿ ಅಂಗ ಸಂಸ್ಥೆಗಳು ಸಾರ್ವಜನಿಕರ ಮನರಂಜನೆಗಾಗಿ ನಿರ್ವಹಿಸುತ್ತಿರುವ ಉದ್ಯಾನವನಗಳು.

2.3.10. **"ಪುನರ್ ಪರಿಶೀಲನಾ ಅರ್ಜಿ"** ಅಂದರೆ ಹೊರಾಂಗಣ ಜಾಹೀರಾತಿನ ಪ್ರದರ್ಶನ ಮತ್ತು ಜಾಹೀರಾತು ಫಲಕ ಅಳವಡಿಕೆಗೆ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಬೃ.ಬೆಂ.ಮ.ಪಾಲಿಕೆಯ ನಿಯೋಜಿತ ಅಧಿಕಾರಿಗಳು ಹೊರಡಿಸಿದ ಆದೇಶದ ಪುನರ್ ಪರಿಶೀಲನೆ ಕೋರಿ ನಿಗದಿತ ನಮೂನೆಯಲ್ಲಿ ಆಯುಕ್ತರಿಗೆ ಸಲ್ಲಿಸುವ ಅರ್ಜಿ.

2.3.11.**"ಮರುಪರಿಶೀಲನಾ ಸಮಿತಿ"** ಅಂದರೆ, ವ್ಯತ್ಯಾಸಗಳು, ಕೋರಿಕೆಗಳು ಮತ್ತು ಯಾವುದೇ ಇತರೆ ವಿಶೇಷ ಪರಿಗಣನೆಗಳನ್ನು ಮಾಪಿಸಲು, ಮರುಪರಿಶೀಲಿಸಲು ಮತ್ತು ಅನುಮೋದಿಸಲು ಇರುವ ಬೃ.ಬೆಂ.ಮ.ಪಾ.ಕೆಯ ಅಧಿಕಾರಿಗಳು, ತಜ್ಞರು, ಮತ್ತು ಸ್ಥಳೀಯ ಸಮುದಾಯ ಸದಸ್ಯರನ್ನು ಒಳಗೊಂಡ ಒಂದು ಸಮಿತಿ.

2.3.12.**"ಸಂಕೇತ/ಸಂಕೇತ ಫಲಕ"** ಅಂದರೆ, ಸ್ಥಳಗಳು, ಕಟ್ಟಡಗಳು, ಮತ್ತು ಬಾಡಿಗೆ ವ್ಯಾಪಾರ ಹೆಸರುಗಳನ್ನು ಗುರುತಿಸುವುದಕ್ಕಾಗಿ ಮತ್ತು ಹೆಸರಿಸುವುದಕ್ಕಾಗಿ ಇರುವ ಯಾವುದೇ ಚಿಹ್ನೆ. ಪ್ರದರ್ಶನದ ಪ್ರಮಾಣ, ಗಾತ್ರ, ಎತ್ತರ ಮತ್ತು ಸ್ವರೂಪದ ನಿರ್ದಿಷ್ಟ ಅಗತ್ಯಗಳ ಅನುಸರಣೆಗೆ ಒಳಪಟ್ಟು ಎಲ್ಲಾ ಕಟ್ಟಡಗಳ ಮೇಲೆ ಸಂಕೇತ ಫಲಕಗಳನ್ನು ಅನುಮತಿಸಬಹುದು.

2.3.13.**"ಪ್ರದರ್ಶನದ ಪ್ರಮಾಣ"** ಅಂದರೆ, ಜಾಹೀರಾತು ಸಂದೇಶಗಳನ್ನು ಅಳೆಯುವುದಕ್ಕೆ ಇರುವ ಮೂಲಭೂತ ಪ್ರಮಾಣವಾಗಿದ್ದು, ಇದು ಅಕ್ಷರಗಳು, ಸಂಖ್ಯೆಗಳು, ಚಿಹ್ನೆಗಳು, ಶಿರೋನಾಮೆಗಳು ಮತ್ತು ಸಂಕೇತಾಕ್ಷರಗಳನ್ನು ಒಳಗೊಂಡಿರಬಹುದು. ವಿವರಣೆ: ಪ್ರದರ್ಶನ ಪ್ರಮಾಣದ ಸಂಖ್ಯೆಯನ್ನು ಸೂಚಿಸುವ ಮೂಲಕ, ಪ್ರತಿಯೊಂದು ಸ್ವತ್ತಿಗೂ ಅದು ಪ್ರದರ್ಶಿಸಬಹುದಾದ ವಿಷಯದ ಪ್ರಮಾಣದ ಮೇಲೆ ಒಂದು ಪರಿಮಿತಿಯನ್ನು ಒದಗಿಸಲಾಗುತ್ತದೆ.

2.3.14.**"ವ್ಯತ್ಯಾಸ(ಭಿನ್ನತೆ)"** ಅಂದರೆ, ಯೋಜನೆಯ ಮೇಲೆ ವಸ್ತುಪ್ರಭಾವ ಬೀರದಂತಹ ಮತ್ತು ಸಾರ್ವಜನಿಕ ಅನಾನುಕೂಲತೆ ಉಂಟುಮಾಡದ ರೀತಿಯಲ್ಲಿ ಸುಗ್ರೀವಾಜ್ಞೆಯಲ್ಲಿ ಬದಲಾವಣೆ ಅಥವಾ ಸಡಿಲಿಕೆ ಮಾಡುವುದು.

2.3.15.**"ವಲಯ"** ಅಂದರೆ, ಮಧ್ಯಭಾಗದಿಂದ ಗಡಿಯವರೆಗೆ, 1,2,3 ಮೂರು ವಲಯಗಳಲ್ಲಿ ಸ್ವತ್ತುಗಳನ್ನು ಪತ್ತೆಹಚ್ಚುವುದಕ್ಕೆ ಪಾಲಿಕೆಯು ವಿವರಿಸಿರುವ ಗಡಿಭಾಗಗಳು.

## 2.4.ಜಾಹೀರಾತುಗಳ ವಿಧಗಳು

2.4.1.**"ಮೇಲ್ಕಟ್ಟು ಚಿಹ್ನೆ"** ಅಂದರೆ, ಒಂದು ಅಂಗಡಿಯ ಕಿಟಕಿ ಅಥವಾ ದ್ವಾರಮಾರ್ಗದಲ್ಲಿ ಬಿಸಿಲು ಅಥವಾ ಮಳೆಯನ್ನು ತಡೆಯಲು, ಉಪಯೋಗಿಸುವ ಮತ್ತು ಒಂದು ಚೌಕಟ್ಟಿನಲ್ಲಿ ವಿಸ್ತರಿಸಿದ ಕ್ಯಾನ್ವಾಸ್ ಹಾಳೆ ಅಥವಾ ಇತರೆ ವಸ್ತುವಿನ ಮೇಲೆ ಬರೆಯಲು ಅನುಮತಿಸಲಾಗಿರುವ ಚಿತ್ರನಕ್ಷೆ ಅಥವಾ ಅಕ್ಷರಗಳು.

2.4.2.**"ಬ್ಯಾನರ್ ಚಿಹ್ನೆ"** ಅಂದರೆ, ಸಾರ್ವಜನಿಕ ಸ್ಥಳದಲ್ಲಿ ಜನರ ಆಕರ್ಷಣೆಯನ್ನು ಸೆಳೆಯುವ ಸಲುವಾಗಿ ಪ್ರದರ್ಶನ ಮಾಡುವ ಯಾವುದೆ ಸ್ವಯಂ–ಜಾಹೀರಾತು ಅಥವಾ ಘೋಷಣೆ ಅಥವಾ ಲಿಖಿತ ವಿಷಯವಿರುವ ವಸ್ತ್ರದ ತುಂಡು ಅಥವಾ ಬಗ್ಗುವ ಗುಣವುಳ್ಳ ವಸ್ತು.

2.4.3. **"ಹಿಂದಿನಿಂದ ಪ್ರಕಾಶಿತ ಹೊಂದುವ ಚಿಹ್ನೆ"** ಅಂದರೆ, ಜಾಹೀರಾತು ಹಿಂಬದಿಯಿಂದ ಬೆಳಕುಬೀರುವ ರೀತಿಯಲ್ಲಿ ವಿದ್ಯುತ್ ದೀಪಗಳ ಮುಂಭಾಗದಲ್ಲಿ ಒಂದು ಮಡಚಿಡುವ ಹಾಳೆಯ ಮೇಲೆ ಮುದ್ರಣ ಮಾಡಲಾಗಿರುವ ಚಿತ್ರನಕ್ಷೆ.

2.4.4.**“ಕಟ್ಟಡಕ್ಕೆ ಸುತ್ತಿದ ಜಾಹೀರಾತು ಚಿಹ್ನೆ”** ಅಂದರೆ, ಬಾಗಬಲ್ಲ ಮುದ್ರಿಸಲಾದ ವಸ್ತುವನ್ನು ಬಳಸಿ ಯಾವುದೇ ಕಟ್ಟಡದ ಮುಂಭಾಗದಲ್ಲಿ ಪ್ರದರ್ಶಿಸಲಾಗುವ ಚಿತ್ರನಕ್ಷೆ. ಸಾಮಾನ್ಯವಾಗಿ ಇದನ್ನು, ನಿರ್ಮಾಣ ಮಾಡಲಾಗುತ್ತಿರುವ ಅಥವಾ ರಿಪೇರಿ ಮಾಡಲಾಗುತ್ತಿರುವ ಕಟ್ಟಡದ ಮುಂಭಾಗ ಅಥವಾ ಸಾರುವೆಯುದ್ದಕ್ಕೂ ಎಳೆದು ಕಟ್ಟುತ್ತಾರೆ ಅಥವಾ ಗಾಜಿನಮುಂಬದಿ ಅಥವಾ ಕಿಟಕಿಗೆ ಅದನ್ನು ಅಂಟಿಸಿರುತ್ತಾರೆ.

2.4.5.**“ಬಸ್ ತಂಗುದಾಣ ಜಾಹೀರಾತು”** ಅಂದರೆ, ಬಸ್ ತಂಗುದಾಣದ ವಿನ್ಯಾಸದ ಮೇಲೆ ಪ್ರದರ್ಶಿಸಲಾಗುವ ಜಾಹೀರಾತು.

2.4.6.**“ಮೇಲ್ಕಟ್ಟು ಜಾಹೀರಾತು” ಅಂದರೆ, ಕಟ್ಟಡದ ಪ್ರವೇಶದ್ವಾರದ ಮೇಲೆ ಕೂರಿಸಲಾಗಿರುವ, ಆಧಾರವಿರುವ ಭಾವಣಿಯಂತಹ ಪ್ರಕ್ಷೇಪದ ಮೇಲೆ, ಒಂದು ಚೌಕಟ್ಟಿನೊಳಗೆ ಕ್ಯಾನ್ವಾಸ್ ಹಾಳೆ ಅಥವಾ ಇತರ ವಸ್ತುವನ್ನು ಎಳೆದುಕಟ್ಟಲು ಅನುಮತಿ ನೀಡಲಾಗಿರುವ ಚಿತ್ರನಕ್ಷೆ ಅಥವಾ ಅಕ್ಷರಗಳು.**

2.4.7**“ಮಾರ್ಗಸೂಚಿ (ದಿಕ್ಸೂಚಿ) ಫಲಕಗಳು” ಅಂದರೆ, ಸಾಮಾನ್ಯ ಜನತೆಯ ಅನುಕೂಲಕ್ಕಾಗಿ ಖಾಸಗಿ/ವಾಣಿಜ್ಯ ಸಂಸ್ಥೆಗಳು ತಮ್ಮ ಕಚೇರಿ ಅಥವಾ ವಾಣಿಜ್ಯ ಮಳಿಗೆಗೆ ಮಾರ್ಗ ಸೂಚಿಸಲು** ಅಳವಡಿಸಿರುವ ಫಲಕಗಳು.

2.4.8."**ಗುಮ್ಮಟ ಮೇಲ್ಕಟ್ಟುಗಳು**" ಅಂದರೆ, ಒಂದು ಅಂಗಡಿಯ ಕಿಟಕಿ ಅಥವಾ ದ್ವಾರಮಾರ್ಗದಲ್ಲಿ ಬಿಸಿಲು ಅಥವಾ ಮಳೆಯನ್ನು ತಡೆಯಲು, ಉಪಯೋಗಿಸುವ ಮತ್ತು ಒಂದು ಗುಮ್ಮಟ ಆಕಾರದ ಚೌಕಟ್ಟಿನ ಮೇಲೆ ವಿಸ್ತರಿಸಿರುವ ಕ್ಯಾನ್ವಾಸ್ ಹಾಳೆ ಅಥವಾ ಇತರ ವಸ್ತುವಿನ ಮೇಲೆ ಬರೆಯಲು ಅನುಮತಿಸಲಾಗಿರುವ ಚಿತ್ರನಕ್ಷೆ ಅಥವಾ ಅಕ್ಷರಗಳು.

2.4.9.**“ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಪ್ರದರ್ಶನ”** ಅಂದರೆ, ಒಂದು ಆಯಕಟ್ಟಿನ ಮೇಲೆ ನಿಶ್ಚಲವಾಗಿ ಇರಿಸಿ **ವಿದ್ಯುಚ್ಛಕ್ತಿ ಸಹಾಯದಿಂದ** ಪ್ರದರ್ಶಿಸುವ ವಿದ್ಯುನ್ಮಾನ ಚಾಲಿತ ಜಾಹೀರಾತು ಪ್ರದರ್ಶನ. ನಿಯಾನ್ ದೀಪಗಳು, ಎಲ್‌ಇಡಿ ಅಥವಾ ಎಲ್‌ಸಿಡಿ ಮೂಲಕ ಪ್ರದರ್ಶಿಸುವ ಜಾಹೀರಾತುಗಳು.

2.4.10.**“ಫುಟ್ ಓವರ್ ಬ್ರಿಡ್ಜ್ ಅಥವಾ ಪಾದಚಾರಿ ಮೇಲುಸೇತುವೆ ಮೇಲಿನ ಜಾಹೀರಾತುಗಳು”** ಅಂದರೆ, ಪಾದಚಾರಿ ಫುಟ್ ಓವರ್ ಬ್ರಿಡ್ಜ್ ಗಳ ಒಳಭಾಗದಲ್ಲಿ ಪ್ರದರ್ಶಿತವಾಗಿರುವ ಜಾಹೀರಾತು.

2.4.11."**ಗ್ಯಾಂಟ್ರಿ ಜಾಹೀರಾತು**" ಅಂದರೆ, ರಸ್ತೆಯ ಅಡ್ಡಮಾರ್ಗಗಳಲ್ಲಿ ನಿಲ್ಲಿಸಲಾಗಿರುವ ಆಧಾರ ಕಂಬಗಳ ಮೇಲ್ಭಾಗಕ್ಕೆ ಸೇರಿಸಲಾಗಿರುವ ತೊಲೆಯಾಕಾರದ ಭಾಗದೊಂದಿಗೆ ರಸ್ತೆಯ ಇಕ್ಕೆಲಗಳಲ್ಲಿ ಸ್ಥಾಪಿಸಲಾಗಿರುವ ಲೋಹದ ಭಾಗಗಳಿರುವ ಕಂಬಗಳ ಮೇಲೆ, ಸಂಚಾರದ ವಿರುದ್ಧ ದಿಕ್ಕಿಗೆ ಮುಖಮಾಡಿರುವಂತೆ **ಅಳವಡಿಸಿರುವ ಜಾಹೀರಾತುಗಳು.**

2.4.12. **“ದೀಪ್ತ ಚಿತ್ರನಕ್ಷೆ”** ಅಂದರೆ, ವಿದ್ಯುದ್ದೀಪಗಳಿರುವ ಚಿತ್ರನಕ್ಷೆಯಾಗಿದ್ದು, ಸೂರ್ಯಾಸ್ತದ ಬಳಿಕವೂ ಕಣ್ಣಿಗೆ ಕಾಣುವಂತೆ ಮಾಡಲು ಅದರೊಳಗೆ ದೀಪ ಬೆಳಗಿಸುವುದಕ್ಕಾಗಿ ಸ್ವಿಚ್ ಆನ್ ಮಾಡಲಾಗುತ್ತದೆ.

2.4.13."**ಕಿಯೋಸ್ಕ್ ಜಾಹೀರಾತುಗಳು**" ಅಂದರೆ, ಸಾರ್ವಜನಿಕ ಕಿಯೋಸ್ಕ್ ಅಥವಾ ಬೂತ್ ನ ಮೇಲೆ ಹಾಕಲಾಗಿರುವ ಜಾಹೀರಾತು.

2.4.14.**“ಡೇರ ಚಿತ್ರನಕ್ಷೆ”** ಅಂದರೆ, ಯಾವುದೇ ಕಂಬಗಳು ಅಥವಾ ಆಧಾರಗಳಿಲ್ಲದ ಕಟ್ಟಡದ ಪ್ರವೇಶದ್ವಾರದ ಮೇಲ್ಕಟ್ಟಿನ ಮೇಲೆ ಹಾಕಲು ಅನುಮತಿಸಲಾಗಿರುವ ಯಾವುದೇ ಚಿತ್ರನಕ್ಷೆ ಅಥವಾ ಅಕ್ಷರಗಳ ಗುಂಪು

2.4.15.**“ಮೊಬೈಲ್/ಪೋರ್ಟಬಲ್ ಜಾಹೀರಾತು ಪ್ರದರ್ಶನ”** ಅಂದರೆ, ಜಾಹೀರಾತು ಇನ್ನಷ್ಟು ಉತ್ತಮವಾಗಿ ಕಾಣಿಸುವಂತಾಗಲು, ಪ್ರಮುಖ ಪ್ರದೇಶಗಳಲ್ಲಿ ಓಡಿಸಿಕೊಂಡು ಹೋಗುವ ಅಥವಾ ನಿಲ್ಲಿಸುವ ರೀತಿಯಲ್ಲಿ ಒಂದು ವಾಹನದ ಮೇಲೆ ಅಥವಾ ಹಿಂಬದಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ದ್ವಿಬದಿ ಅಥವಾ ಏಕಬದಿಯ ಪ್ಯಾನಲ್. ಒಂದು ಉತ್ಪನ್ನ ಅಥವಾ ಸೇವೆಯನ್ನು ಪ್ರಚಾರ ಮಾಡುವುದು, ಅಥವಾ ಅದರ ನಿವೇಶನದಾಚೆ ಸ್ಥಾಪಿತವಾಗಿರುವ ವ್ಯಾಪಾರ ಅಥವಾ ಚಟುವಟಿಕೆಯ ಬಗ್ಗೆ ಸಾರ್ವಜನಿಕರಿಗೆ ನಿರ್ದೇಶಿಸುವುದು ಇದರ ಮುಖ್ಯ ಉದ್ದೇಶ.

2.4.16.**“ಸ್ಮಾರಕ ಚಿತ್ರನಕ್ಷೆ” ಅಂದರೆ, ಪ್ರವೇಶದ್ವಾರ ಅಥವಾ ಪ್ರಧಾನ ಸ್ಥಳವಾಗಿರಬೇಕೆಂಬ ಉದ್ದೇಶದಿಂದ ಅಲಂಕೃತವಾದ ಇಟ್ಟಿಗೆ, ಮರ, ಲೋಹ ಅಥವಾ ಇತರ ವಸ್ತುವಿನ ಮೇಲೆ ಪ್ರದರ್ಶಿಸಲಾಗುವ ಸ್ವಯಂ ಆಗಿನಿಂತಿರುವ ಚಿತ್ರನಕ್ಷೆ.**

2.4.17.**“ನಿಯಾನ್ ಪ್ರದರ್ಶನ”** ಅಂದರೆ, ಕೇವಲ ರಾತ್ರಿ ವೇಳೆಗಳಲ್ಲಿ ಮಾತ್ರ ಸ್ವಿಚ್ ಆನ್ ಮಾಡಬಹುದಾದ ನಿಯಾನ್ ದೀಪಗಳು/ಬಲ್ಬುಗಳು/ದೀಪಗಳು ಇರುವ ಚಿತ್ರನಕ್ಷೆ.

2.4.18.**“ಅದೀಪ್ತ ಚಿತ್ರನಕ್ಷೆಗಳು”** ಅಂದರೆ, ಬೆಳಕಿನ ಬಾಹ್ಯ ಮೂಲವು ಅದರೆಡೆಗೆ ನಿರ್ದೇಶಿತವಾಗಿರದ ಚಿತ್ರನಕ್ಷೆ

2.4.19."**ಹೊರಾಂಗಣ ಜಾಹೀರಾತು**" ಅಂದರೆ, ಹೊರಗಿನ ಪರಿಸರದಲ್ಲಿ ಪ್ರದರ್ಶಿತವಾಗುವ ಜಾಹೀರಾತು. ಕೆಲವೊಮ್ಮೆ ಇದನ್ನು ಮನೆಯಾಚೆಯ ಜಾಹೀರಾತುಗಳು ಎಂದು ಕರೆಯಲಾಗುತ್ತದೆ.

2.4.20.**“ಕಂಬ ಪ್ರದರ್ಶನ”** ಅಂದರೆ, ಒಂದು ನಿಶ್ಚಲ ಸ್ಥಾನದಲ್ಲಿ ಶಾಶ್ವತವಾಗಿ ಆಧಾರವಾಗಿರುವ ಒಂಟಿ ಕಂಬದ ಮೇಲೆ, ದ್ವಿಮುಖವಾಗಿ ಅಥವಾ ಏಕಮುಖವಾಗಿ ನಿಲ್ಲಿಸಲಾಗಿರುವ ಆಧಾರರಹಿತ ಬೀದಿಪ್ಯಾನಲ್.

2.4.21.**“ಭಿತ್ತಿಪತ್ರ”** ಅಂದರೆ, ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶಿಸುವುದಕ್ಕಾಗಿ ಒಂದು ಕಾಗದದ ಹಾಳೆ, ಅಥವಾ ಯಾವುದೇ ಇತರ ವಸ್ತುವನ್ನು ಜಾಹೀರಾತಿಗಾಗಿ ಉಪಯೋಗಿಸುವುದು. ಸಾಮಾನ್ಯವಾಗಿ ಇದನ್ನು ಗೋಡೆ, ಪಾಗಾರ(ಕಾಂಪೌಂಡು), ಮೋಟುಗೋಡೆ, ಅಥವಾ ಅಂತಹ ಮಟ್ಟಸ ಮೇಲ್ಮೈ ಮೇಲೆ ಅದನ್ನು ಅಂಟಿಸುತ್ತಾರೆ.

2.4.22.**“ಪ್ರಕ್ಷೇಪನ ಚಿತ್ರನಕ್ಷೆ”** ಅಂದರೆ, ವಾಣಿಜ್ಯ, ಕಚೇರಿ, ಔದ್ಯಮಿಕ, ಅಥವಾ ಮನರಂಜನಾ ಉದ್ದೇಶಗಳಿಗಾಗಿ ಬಳಸವಂತಹ ಕಟ್ಟಡ ಮುಖ್ಯ ಗೋಡೆಗೆ ಅಂಟಿಸಲಾಗಿರುವ ಯಾವುದೇ ಚಿತ್ರನಕ್ಷೆ.

2.4.23. **“ಅಂಗಡಿ ಮುಂಭಾಗದ ಚಿತ್ರನಕ್ಷೆ”** ಅಂದರೆ, ಒಂದು ವಾಣಿಜ್ಯ ಅಥವಾ ವ್ಯಾಪಾರ ಚಟುವಟಿಕೆ ನಡೆಯುವ ಸ್ಥಳದ ಮುಂಭಾಗದಲ್ಲಿ ದೀಪ್ತ ಅಥವಾ ಅದೀಪ್ತ ಚಿತ್ರನಕ್ಷೆಯ ಪ್ರದರ್ಶನ.

2.4.24.**“ಬೀದಿ ಪೀಠೋಪಕರಣ ಪ್ರಾಯೋಜಕತ್ವ ಜಾಹೀರಾತುಗಳು”** ಅಂದರೆ, ಬೆಂಚುಗಳು, ಕಸದತೊಟ್ಟಿಗಳು, ರೈಲಿಂಗ್ಸ್ ಗಳು, ಮತ್ತು ಈ ರೀತಿಯ ಸಾರ್ವಜನಿಕ ಸ್ವತ್ತಿನ ಮೇಲೆ ಪ್ರದರ್ಶಿಸಲಾಗುವ ಜಾಹೀರಾತುಗಳು.

2.4.25.**“ತಾತ್ಕಾಲಿಕ ಕಮಾನು ಜಾಹೀರಾತುಗಳು”** ಅಂದರೆ, ಗೌರವಾನ್ವಿತ ವ್ಯಕ್ತಿಗಳನ್ನು ಸ್ವಾಗತಿಸುವಂತಹ ನಿರ್ದಿಷ್ಟ ಸಂದರ್ಭಗಳಲ್ಲಿ ರಸ್ತೆಯ ಮೇಲ್ಭಾಗದಲ್ಲಿ ಅಡ್ಡವಾಗಿ ಸ್ಥಾಪಿಸಲಾದ ತಾತ್ಕಾಲಿಕ ರಚನೆಗಳ ಮೇಲೆ ಇರುವ ಜಾಹೀರಾತುಗಳು ಅಥವಾ ಮೂರುದಿನಗಳಿಗೆ ಪ್ರದರ್ಶನಗೊಳ್ಳುವುದನ್ನು ಮೀರದಂತೆ, ಅಂಗಡಿಗಳು ಅಥವಾ ಸಂಸ್ಥೆಗಳು, ಮಾರಾಟ ಪ್ರಚಾರಕ್ಕಾಗಿ ತಮ್ಮ ಅಂಗಡಿಯ ಮೇಲೆ ಅಥವಾ ಹತ್ತಿರ ಸ್ಥಾಪಿಸುವಂತಹ ತಾತ್ಕಾಲಿಕ ರಚನೆಗಳ ಮೇಲೆ ಇರುವ ಜಾಹೀರಾತುಗಳು.

2.4.26.**"ತಾತ್ಕಾಲಿಕ ಕಂಬ ಚಿತ್ರನಕ್ಷೆಗಳು"** ಅಂದರೆ, ರಾಜಕೀಯ ಸಭೆಗಳು, ಉತ್ಸವ ಮೇಳಗಳು, ಶೈಕ್ಷಣಿಕ ಸಭೆಗಳು, ಕ್ರೀಡಾಸ್ಪರ್ಧೆಗಳು, ಅಥವಾ ಇತರ ಸಾರ್ವಜನಿಕ ಸಂಬಂಧಿತ ಲಾಭಕ್ಕಾಗಿಯಲ್ಲದ ಕಾರ್ಯಕ್ರಮಗಳಿಗಾಗಿ ಸ್ಥಾಪಿಸಲಾದ ತಾತ್ಕಾಲಿಕ ರಚನೆಯ ಜಾಹೀರಾತುಗಳು. ಇವುಗಳ ಸ್ಥಾಪನೆಗಾಗಿ ರಸ್ತೆಗಳಲ್ಲಿ ಅಥವಾ ಪಾದಚಾರಿ ಮಾರ್ಗಗಳಲ್ಲಿ ತೂತುಕೊರೆಯುವದೂ ಒಳಗೊಂಡಂತೆ, ಯಾವುದೇ ರೀತಿಯ ಸ್ಥಾಪನೆಯನ್ನೂ ಅನುಮತಿಸಲಾಗುವುದಿಲ್ಲ.

2.4.27."**ಸಂಚಾರ ಚಿತ್ರನಕ್ಷೆಗಳು**" ಅಂದರೆ, ನಗರದೊಳಗೆ, ಸಂಚಾರ ಸಂಕೇತಗಳ ಕೆಳಗೆ ಅಥವಾ ಹಿಂಬದಿಯಲ್ಲಿ ಆದರೆ ಅದೇ ಕಂಬದ ಮೇಲೆ "ಸಂಚಾರ ಸಂಕೇತ(ಸಿಗ್ನಲ್ಲು) ದೊಂದಿಗೆ ಪ್ರದರ್ಶಿಸಲಾಗುವ ಜಾಹೀರಾತುಗಳು

2.4.28. **"ವಾಹನ ಸಂಕೇತಗಳು" ಅಂದರೆ, ಯಾವುದೇ ಸಾರ್ವಜನಿಕ ಬಸ್ಸು, ಆಟೋರಿಕ್ಷಾ ಅಥವಾ ಟ್ಯಾಕ್ಸಿಯ ಮೇಲೆ ಅಚಿಟಿಸಲಾಗುವ ವಾಣಿಜ್ಯ ಜಾಹೀರಾತು. ಇದು ಸ್ವ-ಪ್ರಚಾರವನ್ನು ಒಳಗೊಂಡಿರುವುದಿಲ್ಲ.**

2.4.29. **"ಗೋಡೆ ವರ್ಣಚಿತ್ರ ನಕ್ಷೆ"** ಅಂದರೆ, ಕಟ್ಟಡ ಅಥವಾ ಯಾವುದೇ ಪುರಕಟ್ಟಡದ ಗೋಡೆಯ ಮೇಲೆ ನೇರವಾಗಿ ವರ್ಣಚಿತ್ರರಚನೆ ಮಾಡುವ ಮೂಲಕ ಪ್ರದರ್ಶಿಸಲಾಗಿರುವ ಜಾಹೀರಾತು.

2.4.30.**"ಕಿಟಕಿ ಚಿತ್ರನಕ್ಷೆ" ಅಂದರೆ,** ಹೊರಗಡೆಯಿಂದ ಕಾಣುವ ರೀತಿಯಲ್ಲಿ ಹಾಕುವುದಕ್ಕೆ ಅನುಮತಿಕೊಡಬಹುದಾದ ಪ್ರದರ್ಶನ ಪ್ರದೇಶ. ಇವು ದೀಪ್ತವಾಗಿರಬಹುದು ಅಥವಾ ನಿಶ್ಚಲವಾಗಿರಬಹುದು ಅಥವಾ ಯಾಂತ್ರಿಕವಾಗಿ ಚಲಿಸಬಹುದಾಗಿರಬಹುದು. ವಿಧ ಯಾವುದೇ ಇದ್ದರೂ, ಕಿಟಕಿಯ ಮೇಲಿನ ಜಾಹೀರಾತನ್ನು ವಾಣಿಜ್ಯ ಸ್ವಜಾಹೀರಾತು ಎಂದೇ ಪರಿಗಣಿಸಲಾಗುತ್ತದೆ.

## 2.5.ಪ್ರದರ್ಶನದ ಪ್ರಮಾಣಗಳು(ಯೂನಿಟ್ ಗಳು)

2.5.1. "ಪ್ರದರ್ಶನದ ಪ್ರಮಾಣಗಳು(ಯೂನಿಟ್ ಗಳು)" ಅಂದರೆ, ಚಿತ್ರನಕ್ಷೆ ಮತ್ತು ಸಾರ್ವಜನಿಕ ಸಂದೇಶಗಳನ್ನು ಅಳೆಯುವುದಕ್ಕೆ ಇರುವ ಮೂಲಭೂತ ಪ್ರಮಾಣವಾಗಿದ್ದು, ಇವುಗಳು ಅಕ್ಷರಗಳು, ಸಂಖ್ಯೆಗಳು, ಚಿಹ್ನೆಗಳು, ಲೋಗೋಗಳು ಅಥವಾ ಸಂಕೇತಾಕ್ಷರಗಳನ್ನು ಹೊಂದಿರಬಹುದು. ಪ್ರತಿಯೊಂದು ಸ್ವತ್ತಿಗೂ ಅದು ಪ್ರದರ್ಶಿಸಬಹುದಾದ ಗರಿಷ್ಠ ಪ್ರಮಾಣದ ವಿಷಯಗಳನ್ನು ಮಾತ್ರ ಅನುಮತಿಸಲಾಗುತ್ತದೆ.

2.5.2. ಪ್ರತಿಯೊಂದು ಸ್ವತ್ತಿಗೂ ಗರಿಷ್ಠ ಹತ್ತು ಯೂನಿಟ್ ಗಳ ಮಾಹಿತಿಯನ್ನು ಪ್ರದರ್ಶಿಸಲು ಅನುಮತಿಸಲಾಗುತ್ತದೆ. ಈ ಪ್ರದರ್ಶನವು, 60:40 ಕನ್ನಡ:ದ್ವಿತೀಯ ಭಾಷೆಯ ಅನುಪಾತದಲ್ಲಿ ಇರುತ್ತದೆ. ಒಂದು ಭಾಷೆಗೆ ನೀಡಲಾಗಿರುವ ಪರಿಮಿತಿ ಕಡಿಮೆಯಾದಲ್ಲಿ ಅದನ್ನು ಮತ್ತೊಂದು ಭಾಷೆಗೆ ವರ್ಗಾಯಿಸಲಾಗದು.

2.5.3. ಚಿತ್ರನಕ್ಷೆಗಳು, ನೋಂದಾಯಿತ ಹೆಸರು, ವ್ಯಾಪಾರಚಿಹ್ನೆಯನ್ನು ಪ್ರದರ್ಶಿಸಬೇಕಾಗಿದ್ದು, ಇದನ್ನು ನಿವೇಶನದಮೇಲಿನ ಬಳಕೆಗೆ ಅಥವಾ ಚಟುವಟಿಕೆಗೆ ಉಪಯೋಗಿಸಬಹುದೇ ಹೊರತು ಯಾವುದೇ ವಾಣಿಜ್ಯ ಬ್ರ್ಯಾಂಡ್ ಅನ್ನು ಪ್ರಚಾರಮಾಡುವುದಕ್ಕೆ ಉಪಯೋಗಿಸುವಂತಿಲ್ಲ.

2.5.4. ಕಟ್ಟಡದ ಸಂಖ್ಯೆ, ಕಟ್ಟಡದ ಹೆಸರು, ಮತ್ತು ವಿಳಾಸವನ್ನು, ಮುಖ್ಯ ಹಕ್ಕುಮಾರ್ಗಕ್ಕೆ ಅಭಿಮುಖವಾಗಿ ಮುಂಭಾಗದಲ್ಲಿ ಪ್ರದರ್ಶಿಸಬೇಕು. ಕಟ್ಟಡವು, ಹೆಚ್ಚುವರಿ ಹಕ್ಕುಮಾರ್ಗಕ್ಕೆ ಅಭಿಮುಖವಾದ ಮತ್ತೊಂದು ಮುಂಭಾಗವನ್ನು ಹೊಂದಿದ್ದರೆ, ಇದನ್ನು ಪುನರಾವರ್ತಿಸಬಹುದು.

2.5.5. ಒಂದು ನಿವೇಶನದಲ್ಲಿ ಬಹು ಸಂಸ್ಥೆಗಳು ಸ್ಥಾಪಿತವಾಗಿರುವಂತಹ ಸಂದರ್ಭದಲ್ಲಿ, ಒಂದು ಸಂಯೋಜಿತ ಚಿಹ್ನೆಹಲಗೆಯ ಮೇಲೆ, ಪ್ರತಿಯೊಂದು ಸಂಸ್ಥೆಗೆ ಅನುಮತಿಸಲಾದ ಯೂನಿಟ್ ಗಳಲ್ಲಿ ಪ್ರದರ್ಶಿಸಿರಬೇಕು.

2.5.6. ಚಿತ್ರನಕ್ಷೆ ಅನುಮತಿಯ ಅನುಮೋದನಾ ಬಾರ್ ಕೋಡ್ ಅನ್ನು ವೈಯಕ್ತಿಕ ಹಾಗು ಸಂಯೋಜಿತ ಚಿತ್ರನಕ್ಷೆ ಪ್ರದರ್ಶನಗಳ ಕೆಳಬಲತುದಿಯಲ್ಲಿ ಪ್ರಧಾನವಾಗಿ ಪ್ರದರ್ಶಿಸಿರಬೇಕು. ಈ ಅನುಮೋದನಾ ಬಾರ್ ಕೋಡ್ ಅನುಮತಿಸಲಾದ ಯೂನಿಟ್ ಗಳಲ್ಲಿ ಒಳಗೊಳ್ಳುವುದಿಲ್ಲ.

2.5.7. ಕೆಳಗಿನ ಕೋಷ್ಟಕವು ಯೂನಿಟ್ ಅನುಮೋದನೆಯ ವಿವರಗಳನ್ನು ಒದಗಿಸುತ್ತದೆ :

| | |
|---|---|
| ಒಟ್ಟೂ ಯೂನಿಟ್ ಗಳು | 10 ಯೂನಿಟ್ ಗಳು |
| ಕಟ್ಟಡ ಸಂಖ್ಯೆ | 0.5 ಯೂನಿಟ್ |
| ಂಚಿಹ್ನೆ/ಲೋಗೋ/ವ್ಯಾಪಾರಚಿಹ್ನೆ | 0.5 ಯೂನಿಟ್ |
| ಪರವಾನಗಿ ಸಂಖ್ಯೆ | 0.5 ಯೂನಿಟ್ |
| ಸಂಕ್ಷಿಪ್ತ ಪದ | 0.5 ಯೂನಿಟ್ |
| ಪ್ರಾಥಮಿಕ ಭಾಷೆಯಲ್ಲಿ ಸಂಸ್ಥೆಯ ನೋಂದಾಯಿತ ಹೆಸರು | ಪ್ರತಿ ಯೂನಿಟ್ = 2 ಪದಗಳು (ಉಳಿದ 60% ಯೂನಿಟ್ ಗಳು ಕನ್ನಡ ಭಾಷೆಯಲ್ಲಿರಬೇಕು) |
| ದ್ವಿತೀಯ ಭಾಷೆಯಲ್ಲಿ ಸಂಸ್ಥೆಯ ನೋಂದಾಯಿತ ಹೆಸರು | ದ್ವಿತೀಯ ಭಾಷೆಯಲ್ಲಿ ಶೀರ್ಷಿಕೆಯಲ್ಲಿರುವಂತೆ ಸಂಸ್ಥೆಯ ಹೆಸರು (ಫಾಂಟ್ 80ಮಿ.ಮೀ ಮೀರಬಾರದು) |

2.5.8.ಮಾದರಿ ಉದಾಹರಣೆ: ಬೃ.ಬೆಂ.ಮ.ಪಾ.ಯ ವಾರ್ಡ್ ಕಚೇರಿ ಒಟ್ಟೂ 5.5 ಯೂನಿಟ್ ಗಳನ್ನು ಹೊಂದಿರುತ್ತದೆ.

2.5.8.1.ಮುಖ್ಯ ಶೀರ್ಷಿಕೆ 2 ಯೂನಿಟ್‌ಗಳು = ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ನೋಂದಾಯಿತ ಹೆಸರು)

2.5.8.2 ಕಟ್ಟಡ ಸಂಖ್ಯೆ 502 = 0.5 ಯೂನಿಟ್

2.5.8.3.ಬೃ.ಬೆಂ.ಮ.ಪಾ. ಲೋಗೋ (ದೃಶ್ಯ ಸಂಕೇತ) = 0.5 ಯೂನಿಟ್

2.5.8.4.ಬೃ.ಬೆಂ.ಮ.ಪಾ. (ಸಂಕ್ಷಿಪ್ತ ಪದ) = 0.5 ಯೂನಿಟ್

2.5.8.5.ಶೀರ್ಷಿಕೆ ದ್ವಿತೀಯ ಭಾಷೆ = 2 ಯೂನಿಟ್

## *3.ಚಿತ್ರನಕ್ಷೆ ಅನುಮತಿ(ಪರವಾನಗಿ)*

### 3.1.ಚಿಹ್ನೆಯ ಅಳತೆ

3.1.1.ಎಲ್ಲಾ ಚಿತ್ರನಕ್ಷೆ ಅಳತೆಗಳು, ಎತ್ತರಗಳು, ಪ್ರದೇಶಗಳನ್ನು, ಪಾದಚಾರಿ ಹಾಗು ವಾಹನಚಾಲಕರ ಸುರಕ್ಷಿತ ಸಂಚಾರ, ಸಾರ್ವಜನಿಕ ಹಕ್ಕುಮಾರ್ಗಕ್ಕೆ ತಡೆಯಾಗದಿರುವಿಕೆ, ಚಿತ್ರನಕ್ಷೆಯ ದೃಷ್ಟಿಗೋಚರತೆ ಮತ್ತು ಸ್ಫುಟತೆ, ಬೀದಿಗೆ ಅಭಿಮುಖವಾಗಿರುವ ಕಟ್ಟಡ ರಚನೆಯ ಉದ್ದ, ರಸ್ತೆ ಜಾಲಸಂಪರ್ಕ, ಮತ್ತು ಬೃ.ಬೆಂ.ಮ.ಪಾ. ವಿವರಿಸಿರುವಂತೆ 1ನೇ

ವಲಯದಲ್ಲಿ ಪ್ರದೇಶಗಳ ದಟ್ಟಣೆ ಇವುಗಳನ್ನು ಗಮನದಲ್ಲಿರಿಸಿಕೊಂಡು ನಿಗದಿಪಡಿಸಲಾಗಿರುತ್ತದೆ.

3.1.2.ಚಿತ್ರ ಪ್ರದೇಶವನ್ನು ಕೆಳಕಂಡಂತೆ ಅಳೆಯಲಾಗುತ್ತದೆ

3.1.2.1.ಹಿನ್ನೆಲೆ ಅಥವಾ ಚೌಕಟ್ಟಿನ ಪ್ರದೇಶದ ಮೇಲಿನ ಚಿತ್ರನಕ್ಷೆಗಳಿಗಾಗಿ, ಅದನ್ನು ಯಾವ ರಚನೆಯ ಮೇಲೆ ಪ್ರತಿಷ್ಠಾಪಿಸಲಾಗುತ್ತದೋ ಅದರಿಂದ ಚಿತ್ರವನ್ನು ಬೇರ್ಪಡಿಸಲು ಉಪಯೋಗಿಸುವ ಚಿಹ್ನೆಯ ಮುಖಭಾಗ ಮತ್ತು ಹಿನ್ನೆಲೆಯಾಗಿರುವ ಯಾವುದೇ ವಸ್ತು ಅಥವಾ ಬಣ್ಣವೂ ಒಳಗೊಂಡಂತೆ, ಆ ಹಿನ್ನೆಲೆ ಅಥವಾ ಚೌಕಟ್ಟಿನ ಇಡೀ ಪ್ರದೇಶವನ್ನು ಚಿತ್ರನಕ್ಷೆ ಪ್ರದೇಶ ಎಂದೇ ಲೆಕ್ಕಹಾಕಲಾಗುತ್ತದೆ. ಚಿಹ್ನಾ ಪ್ರದೇಶವು ಯಾವುದೇ ಆಧಾರ ಅಥವಾ ಬ್ರೇಸಿಂಗ್ ಒಳಗೊಂಡಿರುವುದಿಲ್ಲ.

3.1.2.2.ಸ್ವತಂತ್ರವಾಗಿ ನಿಲ್ಲುವ ಚಿಹ್ನೆಯ ಅಳತೆಯು, ಪ್ರದರ್ಶನದ ಬೀದಿಮುಖದ ಒಟ್ಟೂ ಪ್ರದೇಶವಾಗಿರುತ್ತದೆ. ಸ್ವತಂತ್ರವಾಗಿ ನಿಲ್ಲುವ ಅಕ್ಷರಗಳು ಅಥವಾ ಲೋಗೋಗಳನ್ನು ಹೊಂದಿರುವ ಚಿತ್ರನಕ್ಷೆಗಳಿಗೆ, ಪ್ರತಿಯೊಂದು ಅಕ್ಷರ ಅಥವಾ ಲೋಗೋವನ್ನು ಆವರಿಸಿರುವ ಪ್ರತಿಯೊಮದು ಚೌಕ, ವೃತ್ತ, ಆಯತಾಕಾರ, ತ್ರಿಕೋಣ ಅಥವಾ ಇವುಗಳ ಸಂಯೋಜನೆಯ ಒಟ್ಟೂ ಪ್ರದೇಶವಾಗಿ ಲೆಕ್ಕಹಾಕಲಾಗುತ್ತದೆ. ಚಿಹ್ನಾ ಪ್ರದೇಶವು ಯಾವುದೇ ಆಧಾರ ಅಥವಾ ಬ್ರೇಸಿಂಗ್ ಒಳಗೊಂಡಿರುವುದಿಲ್ಲ

3.1.2.3. ಕಿಟಕಿ ಗಾಜಿನ ಒಳಾಂಗಣದಲ್ಲಿ ಅಥವಾ ಹೊರಾಂಗಣದಲ್ಲಿ ಪಾರದರ್ಶಕ ಫಿಲ್ಮ್ ಮೇಲೆ ಮುದ್ರಿಸಲಾದ ಮತ್ತು ಅಚಿಟಿಸಲಾದ ಕಿಟಕಿ ಚಿತ್ರಗಳನ್ನು, ವೈಯಕ್ತಿಕ ಅಕ್ಷರಗಳು ಅಥವಾ ಲೋಗೋಗಳು ಎಂದೇ ಲೆಕ್ಕ ಹಾಕಲಾಗುತ್ತದೆಯಾದರೂ, ಅಂತಹ ವೈಯಕ್ತಿಕ ಅಕ್ಷರಗಳು ಅಥವಾ ಲೋಗೋಗಳ ಸುತ್ತಳತೆಯ ಸುತ್ತಲಿರುವ ಪಾರದರ್ಶಕ ಫಿಲ್ಮ್ ನ ಭಾಗವು, ಕಿಟಕಿಯ 100% ಪಾರದರ್ಶಕತೆಯನ್ನು ತೋರಿಸಬೇಕು.

3.1.2.4.ಮೂರು–ಆಯಾಮದ, ಮುಕ್ತರೂಪದ ಅಥವಾ ಶಿಲ್ಪಕೃತಿ(ಅಸಮತಲ)ಯ ಚಿತ್ರಪ್ರದೇಶವನ್ನು, ಆ ಚಿತ್ರವನ್ನು ಆವರಿಸಿರುವ ಅತ್ಯಂತ ಸಣ್ಣ ಘನದ ನಾಲ್ಕು ಲಂಬಪಕ್ಕಗಳ ಒಟ್ಟೂಪ್ರದೇಶದ 50% ಆಗಿ ಪರಿಗಣಿಸಲಾಗುತ್ತದೆ.

3.1.3.ಚಿತ್ರನಕ್ಷೆಯ ಎತ್ತರ

3.1.3.1.ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳಿಗೆ, ನಕ್ಷೆಯು ಎಲ್ಲಿ ಅನುಷ್ಠಾನವಾಗಬೇಕಾಗಿದೆಯೋ ಅಲ್ಲಿಗೆ ಪಕ್ಕದಲ್ಲಿರುವ ಗ್ರೇಡ್ ವರೆಗಿನಿಂದ ಹಿಡಿದು ಚಿತ್ರದ ಅತಿಎತ್ತರದ ಭಾಗದವರೆಗೆ ಲಂಬ ದೂರವನ್ನು ಅಳತೆಯಾಗಿ ಲೆಕ್ಕ ಹಾಕಲಾಗುತ್ತದೆ.

**3.2. ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳು**

3.2.1. ವಿವರಣೆ: ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳಲ್ಲಿ ಎರಡು ವಿಧಗಳಿವೆ– ಸ್ವತಂತ್ರವಾಗಿನಿಲ್ಲುವ ಕಂಬ ಚಿತ್ರನಕ್ಷೆಗಳು ಮತ್ತು ಸ್ಮಾರಕ ಚಿಹ್ನೆಗಳು

3.2.2. ಅರ್ಹ ಭೂಬಳಕೆಯು, ವಾಣಿಜ್ಯ, ಔದ್ಯಮಿಕ, ಮಿಶ್ರಬಳಕೆ, ಸಾರ್ವಜನಿಕ ಮತ್ತು ಭಾಗಶಃ ಸಾರ್ವಜನಿಕ ಇವುಗಳನ್ನು ಒಳಗೊಂಡಿದೆ. ಚಿತ್ರನಕ್ಷೆಯನ್ನು ಪ್ರದರ್ಶಿಸಲು ಅರ್ಹವಾಗುವುದಕ್ಕೆ ಒಂದು ಸ್ವತ್ತು ಅನುಮತಿಸಬಹುದಾದ ಬಳಕೆ ದಾಖಲೆಯನ್ನು ಒದಗಿಸಬಹುದು.

3.2.3. ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳು, ಸುತ್ತಲಿನ ಸಂದರ್ಭಕ್ಕೆ ಅಥವಾ ಬೀದಿಯ ಸುರಕ್ಷತೆಗೆ ಮಾರಕವಾಗಿದೆ ಎಂದು ಕಂಡುಬಂದರೆ ಅವುಗಳನ್ನು ನಿಷೇಧಿಸಬಹುದಾಗಿದೆ.

3.2.4. ಸ್ವತ್ತಿಗೆ ಅಭಿಮುಖವಾಗಿ, ಒಂದು ಬೀದಿಗೆ ಕೇವಲ ಒಂದು ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಯನ್ನು ಮಾತ್ರ ಅನುಮತಿಸಲಾಗುತ್ತದೆ.

3.2.5. ಒಂದು ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಯನ್ನು ಪ್ರದರ್ಶಿಸಬೇಕಾದಲ್ಲಿ ಸ್ವತ್ತು ಕನಿಷ್ಟ 15 ಮೀಟರುಗಳ ಮುನ್ನೆಲವನ್ನು ಹೊಂದಿರಬೇಕು.

3.2.6.ಉದ್ಯಾನಗಳು, ತೆರೆದ ಸ್ಥಳಗಳು, ಮತ್ತು ಆಟದ ಮೈದಾನಗಳು, ಪ್ರತಿ ಚಿತ್ರನಕ್ಷೆಗೆ ಗರಿಷ್ಟ 5 ಚದರಮೀಟರುಗಳು ಮತ್ತು 2 ಮೀಟರ್ ಎತ್ತರದ ಚಿತ್ರನಕ್ಷೆಗಳನ್ನು ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳಾಗಿ ಅನುಷ್ಠಾನಗೊಳಿಸಬಹುದು.

3.2.7. ವಲಯ 1ರಲ್ಲಿನ ವಾಣಿಜ್ಯ ಮತ್ತು ಮಿಶ್ರ ಬಳಕೆ ಪ್ರದೇಶಗಳಲ್ಲಿ, ಗರಿಷ್ಟ 6 ಮೀಟರುಗಳವರೆಗೆ 20 ಚದರಮೀಟರ್ ಅನುಮತಿಸಲಾಗುತ್ತದೆ.

3.2.8. ವಲಯ2, ವಲಯ 3ರಲ್ಲಿ, ಸಂಸ್ಥೆಗಳು, ಉದ್ಯಮಗಳು, ಮತ್ತು ಸಾರ್ವಜನಿಕ ಸೌಲಭ್ಯಗಳ ವಾಣಿಜ್ಯ ಪ್ರದೇಶಗಳಲ್ಲಿ ಗರಿಷ್ಟ 5 ಮೀಟರ್ ಎತ್ತರದಲ್ಲಿ, ಗರಿಷ್ಟ 6 ಚದರಮೀಟರ್ ಚಿತ್ರನಕ್ಷೆ ಅನುಷ್ಠಾನಕ್ಕೆ ಅನುಮತಿ ನೀಡಲಾಗುತ್ತದೆ.

3.2.9. ಸ್ವತಂತ್ರವಾಗಿ ನಿಲ್ಲುವ ಯಾವುದೇ ಚಿತ್ರನಕ್ಷೆಯು, ಸಾರ್ವಜನಿಕ ಹಕ್ಕುಮಾರ್ಗದ ಮೇಲೆ, ಅದರೊಳಗೆ ಅಥವಾ ಬೇರೆ ಯಾವುದೇ ರೀತಿಯಲ್ಲೂ ಅತಿಕ್ರಮಿಸಬಾರದು.

3.2.10.ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಯ ಕಂಬ ಅಥವಾ ಬುಡಕ್ಕೆ ಯಾವುದೇ ತಾತ್ಕಾಲಿಕ ಚಿತ್ರನಕ್ಷೆಯನ್ನು ಸೇರಿಸಬಾರದು. ಬುಡವನ್ನಾಲೀ ಕಂಬವನ್ನಾಗಲೀ, ಕಂಬರಚನೆಯ ಅವಿಭಾಜ್ಯ ಭಾಗವಾಗಿಲ್ಲದ ಯಾವುದೇ ಅಲಂಕರಣ ವಸ್ತುವಿನಿಂದ ಹೊದಿಸಿರಬಾರದು.

3.2.11.ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳನ್ನು ಆಂತರಿಕವಾಗಿ ಅಥವಾ ಬಾಹ್ಯವಾಗಿ ದೀಪ್ತಗೊಳಿಸಬಹುದು. ಅದನ್ನು ಬಾಹ್ಯವಾಗಿ ದೀಪ್ತಗೊಳಿಸಿದ್ದರೆ, ಎಲ್ಲಾ ಬೆಳಕೂ ಚಿತ್ರನಕ್ಷೆಯ ಮುಖಭಾಗದ ಮೇಲೇ ಬೀಳುವಂತಿರಬೇಕು.

3.2.12. 2 ಚದರಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ವ್ಯಾಸವಿರುವ ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಯು, 2 ಚದರಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ವ್ಯಾಸವಿರುವ ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗೆ 30 ಮೀಟರುಗಳಿಗಿಂತ ಹತ್ತಿರದಲ್ಲಿ ಇರಬಾರದು.

3.2.13. ಸ್ಪಷ್ಟತೆಯ ಉದ್ದೇಶಗಳಿಗಾಗಿ, ಪಠ್ಯವಿರುವ ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಯು ಕನಿಷ್ಟ 40:60 ಅನುಪಾತದಲ್ಲಿ, ಪಠ್ಯದಿಂದ ಋಣಾತ್ಮಕ ಜಾಗದ ಅನುಪಾತವನ್ನು ಹೊಂದಿರಬೇಕು.

3.2.14. ಶಾಪಿಂಗ್ ಸೆಂಟರ, ಮಾಲ್, ಅಥವಾ ಬಹೂಪಯೋಗಿ ಕಟ್ಟಡವು, ಆ ಸ್ವತ್ತಿನ ಪ್ರವೇಶದ್ವಾರ ಮತ್ತು ನಿರ್ಗಮನದ್ವಾರದಲ್ಲಿ ಒಂದೊಂದು ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಯನ್ನು ಸ್ಥಾಪಿಸಿಕೊಳ್ಳಬಹುದು.

3.2.15. ಒಂದು ಸ್ಮಾರಕ ಚಿತ್ರವನ್ನು ತನ್ನ ಏಕೈಕ ಭೂಚಿತ್ರವನ್ನಾಗಿ ಪ್ರದರ್ಶಿಸುವ ನಿವೇಶನವು, ಅದರ ಗಾತ್ರವನ್ನು 20%ವರೆಗೆ ಹೆಚ್ಚಿಸಿಕೊಳ್ಳಬಹುದು.

3.2.16. ಶಾಪಿಂಗ್ ಸೆಂಟರ್, ಮಾಲ್, ಅಥವಾ ಅಬಹೂಪಯೋಗಿ ಕಟ್ಟಡವು. 1.5 ಪಟ್ಟಿನವರೆಗೆ ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಾಗಿ ಇರುವ ಸ್ಥಳ ಮಿತಿಯನ್ನು ಮೀರಬಹುದು. ಆದರೆ, ಅದರೊಳಗೆ ಇರುವ ವೈಯಕ್ತಿಕ ನಿವಾಸಿಗಳಿಗೆ ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳನ್ನು ಉಪಯೋಗಿಸಲು ಅವಕಾಶವಿಲ್ಲ.

3.2.17. ಶಾಪಿಂಗ್ ಸೆಂಟರ್, ಮಾಲ್, ಅಥವಾ ಅಬಹೂಪಯೋಗಿ ಕಟ್ಟಡಗಳ ವೈಯಕ್ತಿಕ ನಿವಾಸಿಗಳು, ಬೀದಿಯಿಂದ ಕಾಣುವಂತೆ ಗೋಡೆ ಪ್ರದರ್ಶನ ಮತ್ತು ಚಾಚಕೊಂಡಿರುವ ಪ್ರದರ್ಶನಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ಇದ್ದರೂ, ಅವುಗಳನ್ನು ಅದರ ಮುನ್ನೆಲದಲ್ಲಿ ಸ್ಥಾಪಿಸುವುದಕ್ಕೆ ಅನುಮತಿ ಇಲ್ಲ.

**3.3.ಬಟ್ಟೆ ಮೇಲ್ಛಾವಣಿ, ಚಿತ್ರಛಾವಣಿ, ಡೇರಗಳು**

3.3.1. ಬಟ್ಟೆ ಮೇಲ್ಛಾವಣಿಗಳು ಕನಿಷ್ಟ 2.2 ಮೀಟರುಗಳ ಲಂಬ ತೆರಪನ್ನು ಹೊಂದಿರಬೇಕು

3.3.2.ನಿವಾಸೇತರ ಬಳಕೆಗಳಿಗೆ ಬಟ್ಟೆ ಮೇಲ್ಛಾವಣಿ ಮತ್ತು ಚಿತ್ರಛಾವಣಿಗಳನ್ನು ಅನುಮತಿಸಲಾಗುತ್ತದೆ. ಡೇರಗಳನ್ನು ಕೇವಲ ನಿವಾಸೇತರ ಬಳಕೆಯಲ್ಲಿ ಮಾತ್ರ

ಅನುಮತಿಸಲಾಗುತ್ತದೆ. ವಲಯ 1ರಲ್ಲಿ, ಬಟ್ಟೆ ಮೇಲ್ಛಾವಣಿಗಳು, ಚಿತ್ರಚಾವಣಿಗಳು ಮತ್ತು ಡೇರಗಳನ್ನು, ಕ್ರಮಾಗತ ಕಟ್ಟಡ ಮುನ್ನೆಲದ ಪ್ರತಿ ಒಂದು ಮೀಟರ್ ಗೆ ಚಿತ್ರಜಾಗದ ಗರಿಷ್ಟ ಎರಡು ಚದರ ಮೀಟರುಗಳ ಜಾಗಕ್ಕೆ ಸೀಮಿತಗೊಳಿಸಲಾಗಿದೆ.

3.3.3. ಬಟ್ಟೆ ಮೇಲ್ಛಾವಣಿಗಳು, ಚಿತ್ರಚಾವಣಿಗಳು ಮತ್ತು ಡೇರಗಳ ಚಿತ್ರನಕ್ಷೆಗಳನ್ನು , ಜಾರಿಯಲ್ಲಿರುವ ಬೈಲಾಗಳು ಮತ್ತು ಅಗ್ನಿಸುರಕ್ಷಾ ನಿಯಮಗಳಲ್ಲಿ ಅನುಮತಿಸಲಾಗಿರುವ ಬಾಳಿಕೆಯ ಹವಾಮಾನ-ನಿರೋಧ ವಸ್ತುವಿನಿಂದ ತಯಾರಿಸಿರಬೇಕು.

3.3.4. ಬಟ್ಟೆ ಮೇಲ್ಛಾವಣಿಗಳು, ಚಿತ್ರಚಾವಣಿಗಳು ಮತ್ತು ಡೇರಗಳು ಸಾರ್ವಜನಿಕ ಹಕ್ಕುಮಾರ್ಗಗಳೊಳಗೆ ಅತಿಕ್ರಮಿಸಬಹುದಾದರೂ, ಮಿತಿಯ ಗೆರೆಯಿಂದ ಕನಿಷ್ಟ ಒಂದು ಮೀಟರ ದೂರದಲ್ಲಿ ಸ್ಥಾಪಿತವಾಗಿರಬೇಕು. ವಲಯ 1ರಲ್ಲಿ, ಅವುಗಳನ್ನು ಮಿತಿಯಗೆರೆಯಿಂದ ಕನಿಷ್ಟ 0.5 ಮೀಟರುಗಳ ದೂರದಲ್ಲಿ ಸ್ಥಾಪಿಸಬಹುದು.

3.3.5. ಡೇರಗಳನ್ನು ಕಟ್ಟಡದ ಪ್ರವೇಶದ್ವಾರದ ಮೇಲೆ ಸ್ಥಾಪಿಸಬಹುದಾದರೂ, ಅವುಗಳ ಅಗಲ ಕಟ್ಟಡ ಪ್ರವೇಶದ್ವಾರದ ಅಗಲಕ್ಕೆ ಸೀಮಿತವಾಗಿರುತ್ತವೆ. ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಹೆಚ್ಚುವರಿಯಾಗಿ 1.5 ಮೀಟರ್ ಗಳವರೆಗಿನ ಜಾಗ ಡೇರದಿಂದ ಮುಚ್ಚಿರಬಹುದು.

3.3.6.ಡೇರಗಳನ್ನು ಯಾವ ಕಟ್ಟಡಕ್ಕೆ ಕಟ್ಟಲಾಗುತ್ತದೆಯೋ ಅವುಗಳಿಂದಲೇ ಭದ್ರವಾಗಿ ಆಧಾರಗೊಳಿಸಿರಬೇಕು. ಆಧಾರವಾಗಿ ಯಾವುದೇ ಬಾಹ್ಯ ಕಂಬಗಳು ಅಥವಾ ಕಾಲಂಗಳನ್ನು ಅನುಮತಿಸಲಾಗುವುದಿಲ್ಲ.

3.3.7. ಬಟ್ಟೆ ಮೇಲ್ಛಾವಣಿಗಳು ಮತ್ತು ಚಿತ್ರಚಾವಣಿಗಳನ್ನು ಹೊರಾಂಗಣವಾಗಿ ದೀಪ್ತಗೊಳಿಸಬಹುದು ಮತ್ತು ಮುದ್ರಿತ ಜಾಗದ ಮೇಲೆ ಬೀಳುವಂತೆ ಕೇಂದ್ರೀಕೃತಗೊಳಿಸಬಹುದು. ಡೇರೆಗಳನ್ನು ಆಂತರಿಕವಾಗಿ ದೀಪ್ತಗೊಳಿಸಬಹುದು.

3.3.8.ಹಿಂಬದಿ ದೀಪ ಮತ್ತು ಜಲಧಾರೆಯ ಬಟ್ಟೆ ಮೇಲ್ಛಾವಣಿಗಳನ್ನು ನಿಷೇಧಿಸಲಾಗಿದೆ. ಗುಮ್ಮಟ ಬಟ್ಟೆ ಮೇಲ್ಛಾವಣಿಗಳನ್ನು ಕಟ್ಟಡದ ಪ್ರವೇಶದ್ವಾರಗಳ ಮೇಲೆ ಮಾತ್ರ ಅನುಮತಿಸಲಾಗುತ್ತದೆ.

3.3.9.ಎಲ್ಲಾಮೂರು ಬಗೆಯ ಚಿತ್ರನಕ್ಷೆ ಮಾದರಿಗಳಲ್ಲಿ ಮುದ್ರಣವನ್ನು ಮೇಲ್ಮೈ ವ್ಯಾಪ್ತಿಯ 25%ಗೆ ಸೀಮಿತಗೊಳಿಸಲಾಗಿದ.

3.3.10. ಬಟ್ಟೆ ಮೇಲ್ಛಾವಣಿ ಚಿತ್ರನಕ್ಷೆ ಎಂದರೆ, ಗರಿಷ್ಟ 0.6 ಮೀಟರುಗಳ ಎತ್ತರದವರೆಗೆ ಒಂದು ಘನಮೇಲ್ಛಾವಣಿಯ ಮೇಲ್ಭಾಗಕ್ಕೆ ಸೇರಿಸಲಾಗಿರುವ ಅನುಮತಿಸಲಾದ ಪದಾಕ್ಷರಗಳು. ಡೇರಗಳು ಎಂದರೆ, ಗರಿಷ್ಟ 1 ಮೀಟರ್ ವರೆಗಿನ ಎತ್ತರಕ್ಕೆ ಡೇರೆಯ ಛಾವಣಿಯ ಮೇಲೆ ಸ್ಥಾಪಿತವಾಗಿರುವ ಅನುಮತಿಸಲಾದ ಪದಾಕ್ಷರಗಳು.

3.3.11. ಚಿತ್ರಚಾವಣಿಗಳ ಆಧಾರ ಸ್ತಂಭಗಳು, ಪರಸ್ಪರ ಅಂತಹ ಸ್ತಂಭಗಳ ನಡುವೆ ಮತ್ತು ಸ್ತಂಭಗಳು ಹಾಗು ಯಾವುದೇ ಕಟ್ಟಡದ ಗೋಡೆಯ ನಡುವೆ ಕನಿಷ್ಟ 1.5 ಮೀಟರುಗಳ ಅಂತರ ಇರಬೇಕು.

3.3.12.ಕೆಳಗಿನ ಷರತ್ತುಗಳಿಗೆ ಒಳಪಟ್ಟು ಕೆಳಬಟ್ಟೆ ಮೇಲ್ಛಾವಣಿಗಳಿಗೆ ಅನುಮತಿ ನೀಡಲಾಗುತ್ತದೆ– ಅ. ಕೆಳ ಬಟ್ಟೆ ಮೇಲ್ಛಾವಣಿ ಚಿತ್ರನಕ್ಷೆಗಳು, ಅದರ ಕೆಳಪಕ್ಕಭಾಗಕ್ಕೆ ಸೇರಿಸಲ್ಪಟ್ಟಿರಬೇಕು. ಕೆಳ ಬಟ್ಟೆ ಮೇಲ್ಛಾವಣಿ ಚಿತ್ರನಕ್ಷೆಗಳು, ಬಟ್ಟೆ ಮೇಲ್ಛಾವಣಿಯಾಚೆ ಚಾಚಿಕೊಂಡಿರಬಾರದು.ಗ್ಯಾಲರಿಗಳು ಹಾಗು ಆರ್ಕೇಡ್ ಗಳಮೇಲೂ ಕೆಳ ಬಟ್ಟೆ ಮೇಲ್ಛಾವಣಿಯನ್ನು ಹಾಕಬಹುದು. ಆ. ಕೆಳ-ಬಟ್ಟೆಮೇಲ್ಛಾವಣಿ ಚಿತ್ರನಕ್ಷೆಗಳು ಕನಿಷ್ಟ 2.2 ಮೀಟರುಗಳ ಲಂಬ ತೆರಪು ಹೊಂದಿರಬೇಕು. ಇ. ಬಟ್ಟೆ ಮೇಲ್ಛಾವಣಿಯನ್ನು ಎಲ್ಲಿ ಹಾಕಬೇಕಾಗಿದೆಯೋ ಅಲ್ಲಿ, ಬೀದಿಯ ಮುನ್ನೆಲದೊಂದಿಗೆ, ಪ್ರತಿ ವ್ಯಾಪಾರಕ್ಕೆ ಗರಿಷ್ಟ ಒಂದು ಕೆಳ-ಬಟ್ಟೆ ಮೇಲ್ಛಾವಣಿಯನ್ನು ಹಾಕಲು ಅನುಮತಿಸಲಾಗುತ್ತದೆ. ಈ. ಕೆಳ-ಬಟ್ಟೆ ಮೇಲ್ಛಾವಣಿಯ ಚಿತ್ರನಕ್ಷೆಗಳು ಗರಿಷ್ಟ ಎರಡು ಚದರ ಮೀಟರ್ ವರೆಗೆ ಮಾತ್ರ

ಅನುಮತಿಸಲಾಗುತ್ತದೆ. ಉ. ಕೆಳ-ಬಟ್ಟೆ ಮೇಲ್ಹಾವಣಿಯನ್ನು ಲೋಹದ ಆಧಾರದೊಂದಿಗೆ ಬಟ್ಟೆಮೇಲ್ಹಾವಣಿಗೆ ಸುಭದ್ರವಾಗಿ ಕಟ್ಟಿರಬೇಕು. ಊ. ಕೆಳ-ಬಟ್ಟೆ ಮೇಲ್ಹಾವಣಿ ಚಿತ್ರನಕ್ಷೆಯನ್ನು, ಜಾರಿಯಲ್ಲಿರುವ ಬೈಲಾಗಳು ಹಾಗು ಅಗ್ನಿಸುರಕ್ಷತಾ ನಿಯಮಗಳು ಅನುಮತಿಸುವ ವಸ್ತುವಿನಿಂದ ಮಾಡಲ್ಪಟ್ಟಿರಬೇಕು.

3.3.13.ಎಲ್ಲಾ ಡೇರಗಳು ಕನಿಷ್ಟ 2.5 ಮೀಟರುಗಳ ಲಂಬ ತೆರಪು ಹೊಂದಿದ್ದು, ಡೇರದ ಛಾವಣಿಯನ್ನು ಎರಡನೆ ಮಹಡಿಯ ಕಿಟಕಿ ಅಡಿಗಟ್ಟಿನ ಕೆಳಗೆ ಹಾಕಿರಬೇಕು.

3.3.14.ಡೇರೆಯ ಮೇಲ್ಹಾವಣಿಯನ್ನು ಅದರ ಛಾವಣಿಯಾಗಿ ಮಾತ್ರ ಬಳಸಬೇಕಲ್ಲದೆ, ಬೇರಾವ ಉದ್ದೇಶಕ್ಕೂ ಬಳಸಬಾರದು ಮತ್ತು ಅದನ್ನು ಅಗ್ನಿನಿರೋಧ ವಸ್ತುವಿನಿಂದ ತಯಾರಿಸಿರಬೇಕು.

3.3.15.ಡೇರದ ಛಾವಣಿಯಿಂದ ನೀರು ಸೋರಬಾರದು, ತೊಟ್ಟಿಕ್ಕಬಾರದು ಅಥವಾ ಸಾರ್ವಜನಿಕ ಹಕ್ಕುಮಾರ್ಗದ ಮೇಲ್ಮೈ ಮೇಲೆ ಬೀಳಬಾರದು. ಈ ರೀತಿ ಸಾರ್ವಜನಿಕ ಹಕ್ಕುಮಾರ್ಗದ ಮೇಲ್ಮೈ ಮೇಲೆ ನೀರು ಹರಿಯುವುದನ್ನು ತಡೆಗಟ್ಟಲು, ಡೇರೆಯ ಮೇಲ್ಹಾವಣಿಯ ಪ್ರತಿ ಭಾಗದಲ್ಲಿ ಸಾಕಷ್ಟು ಪ್ರಮಾಣದ ಕೆಳಮುಖನಾಳಗಳು, ಚರಂಡಿಗಳು, ಮೋರಿಗಳನ್ನು ಅಳವಡಿಸಿರಬೇಕು.

**3.4.ಚಾಚಿಕೊಂಡಿರುವ ಚಿತ್ರನಕ್ಷೆಗಳು**

3.4.1. ಒಂದು ವ್ಯಾಪಾರದ ಪ್ರತಿ ಮುಖಭಾಗಕ್ಕೆ ಕೇವಲ ಒಂದು ಚಾಚು ಚಿತ್ರನಕ್ಷೆಯನ್ನು ಮಾತ್ರ ಅನುಮತಿಸಲಾಗುತ್ತದೆ. ಚಾಚಿಕೊಂಡಿರುವ ಚಿತ್ರನಕ್ಷೆಗಳು ಕಟ್ಟಡದ ಪ್ರವೇಶದ್ವಾರದ ಮೇಲೆ ಅಥವಾ ಅದರ ಬದಿಯಲ್ಲಿರಬೇಕು.

3.4.2.ಗೋಡೆಯಿಂದ 30 ಸೆಂ.ಮೀಗಿಂತ ಹೆಚ್ಚಿಗೆ ಚಾಚಿಕೊಂಡಿರುವ ಚಿತ್ರನಕ್ಷೆಯನ್ನು ಚಾಚಿಕೊಂಡಿರುವ ಚಿತ್ರನಕ್ಷೆ ಎಂದೇ ನಿಯಂತ್ರಿಸಲಾಗುತ್ತದೆ.

3.4.3. ಚಾಚಿಕೊಂಡಿರುವ ಚಿತ್ರನಕ್ಷೆಗಳು, ಪಾದಚಾರಿಮಾರ್ಗದಿಂದ ಕನಿಷ್ಟ 2.5 ಮೀಟರ ಎತ್ತರದವರೆಗೆ ತೆರಪುಗೊಂಡಿರಬೇಕು. ಕಟ್ಟಡಕ್ಕೆ ಕಟ್ಟಲಾದ ಯಾವುದೇ ಚಾಚುಚಿತ್ರನಕ್ಷೆಯು, ಚಿತ್ರನಕ್ಷೆಯ ಆಧಾರ ರಚನೆಯೂ ಒಳಗೊಂಡಂತೆ, ಕಟ್ಟಡದ ಎತ್ತರಕ್ಕಿಂತ ಎತ್ತರಕ್ಕೆ ಚಾಚಿಕೊಂಡಿರಬಾರದು.

3.4.4. ಚಿತ್ರನಕ್ಷೆಗಳು ಕಟ್ಟಡದ ಮುಂಭಾಗದಿಂದ ಪಾದಚಾರಿ ಮಾರ್ಗಕ್ಕೆ, ಕಟ್ಟಡದ ಮುಖಭಾಗದಲ್ಲಿ, ಗರಿಷ್ಟ 1.2ಮೀಟರ್ ವರೆಗೆ ಮತ್ತು ಮಿತಿಗೆರೆಯಿಂದ ಕನಿಷ್ಟ 60 ಸೆಂ.ಮೀವರೆಗೆ ಚಾಚಿಕೊಂಡಿರಬಹುದು.

3.4.5.ಚಿತ್ರನಕ್ಷೆಯ ಚಾಚಿಕೊಳ್ಳುವಿಕೆ ಗೋಡೆಗೆ 90 ಡಿಗ್ರಿ ಕೋನದಲ್ಲಿರಬೇಕು

3.4.6.ಚಾಚಿಕೊಂಡಿರುವ ಚಿತ್ರನಕ್ಷೆಗಳು ಪಕ್ಕದಲ್ಲಿರುವ ಸ್ವತ್ತಿನಚಿತ್ರನಕ್ಷೆಗಳ ಗೋಚರತೆಗೆ ಭಂಗ ಉಂಟುಮಾಡಬಾರದು. ಸೂಕ್ತವಾಗಿ ಅವು, ಕಟ್ಟಡದ ಸಮತಲ ಮಧ್ಯಭಾಗದಲ್ಲಿ ಸ್ಥಾಪಿತವಾಗಿರಬೇಕು.

3.4.7.ಕಟ್ಟಡದ ಮೂಲೆಯಲ್ಲಿ ಚಾಚಿಕೊಂಡಿರುವ ಚಿತ್ರನಕ್ಷೆಗೆ ಕೋನಗಳಅನುಮತಿ ಇಲ್ಲ

3.4.8.ಯಾವುದೇ ಚಾಚಿಕೊಂಡಿರುವ ಚಿತ್ರನಕ್ಷೆಯನ್ನು ಮತ್ತೊಂದು ಚಿತ್ರನಕ್ಷೆಯೊಂದಿಗೆ ಭದ್ರಗೊಳಿಸಿರಬಾರದು ಅಥವಾ ಜೋತುಬಿಟ್ಟಿರಬಾರದು.

3.4.9.ಚಾಚಿಕೊಂಡಿರುವ ಚಿತ್ರನಕ್ಷೆಯನ್ನು ಕಟ್ಟಡ ರಚನೆಯಿಂದ 15 ಸೆಂ.ಮೀ ದೂರದಲ್ಲಿ ಸಿಗಿಸಿರಬೇಕು.

3.4.10.ಚಾಚಿಕೊಂಡಿರುವ ಚಿತ್ರನಕ್ಷೆಗಳನ್ನು ಜಾರಿಯಲ್ಲಿರುವ ಬೈಲಾಗಳು ಹಾಗು ಅಗ್ನಿಸುರಕ್ಷತಾ ನಿಯಮಗಳಲ್ಲಿ ಅನುಮತಿಸಲಾದ ವಸ್ತುಗಳಿಂದ ತಯಾರಿಸಿರಬೇಕು. ಚಾಚಿಕೊಂಡಿರುವ

ಚಿತ್ರನಕ್ಷೆಗಳನ್ನು, ಆಧಾರ ಕಂಬಗಳ ನಡುವೆ ಬಿಗಿಯಾಗಿ ಹಿಡಿದಿಟ್ಟಿರುವ ರೀತಿಯಲ್ಲಿ ಸ್ಥಾಪಿಸಬೇಕು.

3.4.11.ಚಾಚಿಕೊಂಡಿರುವ ಚಿತ್ರನಕ್ಷೆಗಳು, ಎರಡನೆ ಮಹಡಿಯ ಕಿಟಕಿ ಅಡಿಕಟ್ಟಿನ ಮಟ್ಟಕ್ಕಿಂತ ಕೆಳಗೆ ಕೊನೆಗೊಳ್ಳಬೇಕು.

3.4.12.ಚಾಚಿಕೊಂಡಿರುವ ಚಿತ್ರನಕ್ಷೆಗಳನ್ನು ದೀಪ್ತಗೊಳಿಸಬಹುದು ಅಥವಾ ಅದೀಪ್ತಗೊಳಿಸಬಹುದು. ಅವುಗಳನ್ನು ಬಾಹ್ಯವಾಗಿ ದೀಪ್ತಗೊಳಿಸಿದ್ದರೆ. ಎಲ್ಲಾ ಬೆಳಕೂ ಮೇಲಿನಿಂದ ಚಿತ್ರನಕ್ಷೆಗೆ ಬೀಳುವ ರೀತಿಯಲ್ಲಿ ನಿರ್ಮಿಸಿರಬೇಕು.

**3.5.ಕಿಟಕಿ ಚಿತ್ರನಕ್ಷೆಗಳು**

3.5.1.ಕಿಟಕಿ ಚಿತ್ರನಕ್ಷೆಗಳನ್ನು ನಿವಾಸೇತರ ಬಳಕೆಗಾಗಿ ಅನುಮತಿಸಲಾಗುತ್ತದೆ.

3.5.2.ಎಲ್ಲಾ ಕಿಟಕಿ ಚಿತ್ರನಕ್ಷೆಗಳು, ಅವು ತಾತ್ಕಾಲಿಕವಿರಲಿ, ಶಾಶ್ವತವಾದವುಗಳಾಗಿರಲಿ, ಪ್ರತಿಯೊಂದು ಕಿಟಕಿ ವ್ಯಾಪ್ತಿಯ ಮೇಲ್ಮೈನ 25%ಗಿಂತ ಹೆಚ್ಚಾಗಿರಬಾರದು. ಕಿಟಕಿ ವ್ಯಾಪ್ತಿಯನ್ನು, ಕಟ್ಟಡ ಅಥವಾ ನಿರ್ಮಾಣದಿಂದ ಬೇರ್ಪಟ್ಟಿರುವವರೆಗೆ ನಿರಂತರವಾದ ಮೇಲ್ಮೈ ಎಂದೇ ಪರಿಗಣಿಸಲಾಗುತ್ತದೆ. ಕಿಟಕಿಯ ಉದ್ದಪಟ್ಟಿಗಳನ್ನು, ಕಿಟಕಿ ವ್ಯಾಪ್ತಿಯನ್ನು ವಿಭಜಿಸುವ ಅಂಶವಾಗಿ ಪರಿಗಣಿಸಳಾಗುವುದಿಲ್ಲ.

3.5.3. ಆಂತರಿಕವಾಗಿ ಅಥವಾ ಬಾಹ್ಯವಾಗಿ ದೀಪ್ತಗೊಂಡಿರುವ ಕಿಟಕಿ ಚಿತ್ರನಕ್ಷೆಗಳಿಗೆ ಅನುಮತಿಯ ಅಗತ್ಯವಿದೆ. 1,2,3 ವಲಯಗಳಲ್ಲಿರುವ ವಾಣಿಜ್ಯ ಭೂಬಳಕೆಯಲ್ಲಿಮಾತ್ರ ನಿಯಾನ್ ಅಥವಾ ಎಲ್ ಇ ಡಿ ಕಿಟಕಿ ಚಿತ್ರನಕ್ಷೆಗಳನ್ನು ಅನುಮತಿಸಲಾಗುತ್ತದೆ.

**3.6.ತಾತ್ಕಾಲಿಕ ಕಂಬ ಚಿತ್ರನಕ್ಷೆಗಳು**

3.6.1. ಕ್ರೀಡಾಂಗಣಗಳು ಹಾಗು ಮೈದಾನಗಳು ಒಳಗೊಂಡಂತೆ, ಎಲ್ಲಾ ನಿವಾಸೇತರ ಬಳಕೆಗಳಿಗೆ ತಾತ್ಕಾಲಿಕ ಕಂಬ ಚಿತ್ರನಕ್ಷೆಗಳನ್ನು ಅನುಮತಿಸಲಾಗುತ್ತದೆ.

3.6.2.ಎಲ್ಲಾ ತಾತ್ಕಾಲಿಕ ಕಂಬ ಚಿತ್ರನಕ್ಷೆಗಳು ಹಕ್ಕುಮಾರ್ಗದಿಂದ 3 ಮೀಟರ್ ದೂರದಲ್ಲಿ ಸ್ಥಾಪಿತವಾಗಿರಬೇಕು.

3.6.3.ಯಾವುದೇ ಒಂದು ಸಮಯದಲ್ಲಿ ಒಂದು ಲಾಟ್ ನಲ್ಲಿ ಕೇವಲ ಒಂದು ತಾತ್ಕಾಲಿಕ ಕಂಬ ಚಿತ್ರನಕ್ಷೆಯನ್ನು ಮಾತ್ರ ಪ್ರದರ್ಶಿಸಬಹುದು.

3.6.4. ತಾತ್ಕಾಲಿಕ ಕಂಬ ಚಿತ್ರನಕ್ಷೆಗಳು 30ದಿನಗಳ ಅವಧಿಯವರೆಗೆ ಮಾತ್ರ ಪ್ರದರ್ಶನಕ್ಕೆ ಸೀಮಿತವಾಗಿದ್ದು, ಕಾರ್ಯಕ್ರಮವಾದ ಎರಡು ದಿನಗಳೊಳಗೆ ಅವುಗಳನ್ನು ತೆಗೆದುಬಿಡಬೇಕು. ತಾತ್ಕಾಲಿಕ ಕಂಬ ಚಿತ್ರನಕ್ಷೆಗಳನ್ನು ಯಾವುದೇ ಸ್ವತ್ತಿನ ಮೇಲಾದರೂ ಸ್ಥಾಪಿಸಬಹುದಾಗಿದ್ದು, ಒಂದು ವರ್ಷದಲ್ಲಿ ಮೂರಕ್ಕಿಂತ ಹೆಚ್ಚುಬಾರಿ ಆಗಿರಕೂಡದು ಮತ್ತು ಕಾರ್ಯಕ್ರಮಗಳ ನಡುವೆ ಕನಿಷ್ಟ 30 ದಿನಗಳ ಅಂತರವಿರಬೇಕು.

3.6.5. ತಾತ್ಕಾಲಿಕ ಕಂಬ ಚಿತ್ರನಕ್ಷೆಗಳು 2.5 ಚದರ ಮೀಟರ್ ವ್ಯಾಪ್ತಿ ಹಾಗು 2 ಮೀಟರ್ ಎತ್ತರಕ್ಕೆ ಸೀಮಿತವಾಗಿರುತ್ತವೆ..

**3.7.ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳು**

3.7.1.ಪ್ರತಿ ಲಾಟ್ ಗೆ ಕೇವಲ ಒಂದೇ ಒಂದು ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಯನ್ನು ಮಾತ್ರ ಅನುಮತಿಸಲಾಗುತ್ತದೆ.

3.7.2.ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಯ ಮೇಲೆ ಪ್ರದರ್ಶಿತವಾಗುವ ಪ್ರತಿಯೊಂದು ಸಂದೇಶ ಅಥವಾ ಚಿತ್ರ ಕನಿಷ್ಟ ಎಂಟು ಸೆಕೆಂಡುಗಳವರೆಗೆ ನಿಶ್ಚಲವಾಗಿರಬೇಕು. ಸಂದೇಶದ ಯಾವುದೇ ಸುರುಳಿ, ಸ್ಫುರಣ(ಫ್ಲ್ಯಾಶ್), ಚಿತ್ರಸಂಚಲನೆ(ಎನಿಮೇಶನ್), ಅಥವಾ ಚಲನೆಯನ್ನು ನಿಷೇಧಿಸಲಾಗಿದೆ.

3.7.3. ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳನ್ನು ಯಾವುದೇ ಜಿಲ್ಲೆಯ ಶೈಕ್ಷಣಿಕ ಘಟಕ, ದೇವಾಲಯ, ಮತ್ತು ಸಾರ್ವಜನಿಕ ಸುರಕ್ಷಾ ಸೌಲಭ್ಯಗಳು, ಲೋಕೋಪಯೋಗಿ ಸೌಲಭ್ಯಗಳು, ಮತ್ತು ಉದ್ಯಾನಗಳು/ಮೈದಾನಗಳು ಒಳಗೊಂಡಂತೆ, ಯಾವುದೇ ಸರ್ಕಾರೀ ಸೌಲಭ್ಯಕ್ಕಾಗಿ ಅನುಮತಿಸಲಾಗುತ್ತದೆ. ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳನ್ನು ಕೇಂದ್ರ ವ್ಯಾಪಾರ ಜಿಲ್ಲಾ ವಾಣಿಜ್ಯ ಉದ್ಯಮಗಳಲ್ಲೂ ಅನುಮತಿಸಲಾಗುತ್ತದೆ.

3.7.4. ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳನ್ನು, ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆ, ಗೋಡೆ ಚಿತ್ರನಕ್ಷೆ, ಅಥವಾ ಡೇರ ಚಿತ್ರನಕ್ಷೆಯ ಭಾಗವಾಗಿ ಅನುಮತಿಸಲಾಗುತ್ತದೆಯಾದರೂ, ಆ ಚಿತ್ರನಕ್ಷೆಯ ವಿಧಗಳ ಅಗತ್ಯಗಳಿಗೆ ಅವು ಒಳಪಟ್ಟಿರುತ್ತವೆ. ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳನ್ನು ದೊಡ್ಡ ಚಿತ್ರನಕ್ಷೆಯ ರಚನೆಯೊಳಗೆ ಸಮಗ್ರಗೊಳಿಸಬಹುದು. ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳು, ಸ್ವತಂತ್ರವಾಗಿನಿಲ್ಲುವ ಅಥವಾ ಗೋಡೆ ಚಿತ್ರನಕ್ಷೆಯ ವ್ಯಾಪ್ತಿಯ ಗರಿಷ್ಟ 70%ಗೆ ಸೀಮಿತವಾಗಿರುತ್ತದೆ.

3.7.5. ವಿದ್ಯುನ್ಮಾನ ಸಂದೇಶ ಚಿತ್ರನಕ್ಷೆಗಳು, ಯಾವುದೇ ನಿವೇಶನಹೊರಗಿನ ವಾಣಿಜ್ಯ ಜಾಹೀರಾತನ್ನು ಪ್ರದರ್ಶಿಸುವಂತಿಲ್ಲ. ವಿದ್ಯುನ್ಮಾನ ಪ್ರದರ್ಶನ ಸ್ಕ್ರೀನ್ ಗಳನ್ನು ನಿಷೇಧಿಸಲಾಗಿದೆ.

**3.8.ಗೋಡೆ ಚಿತ್ರನಕ್ಷೆಗಳು**

3.8.1.ಗೋಡೆ ಚಿತ್ರನಕ್ಷೆಗಳನ್ನು ವಲಯ 1,2,3ರಲ್ಲಿ ಇರುವ ನಿವಾಸಗಳಲ್ಲಿ ನಿವಾಸೇತರ ಬಳಕೆಗೆ ಅನುಮತಿಸಲಾಗುತ್ತದೆ.

3.8.2.ಕಟ್ಟಡ ಗೋಡೆಗಾಗಿ ಎಲ್ಲಾ ಗೋಡೆ ಚಿತ್ರನಕ್ಷೆಗಳ ಗರಿಷ್ಟ ಅಳತೆಯು, ಗೋಡೆ ಚಿತ್ರನಕ್ಷೆಗಳನ್ನು ಎಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಕಟ್ಟಡದ ಗೋಡೆಯ ಪ್ರತಿ ರೇಖಾತ್ಮಕ ಮೀಟರ್ ಗೆ 2 ಚದರ ಮೀಟರ್ ಗಳಲ್ಲಿ ಸ್ಥಾಪಿಸಿರಬೇಕು.

3.8.3.ಕಟ್ಟಡ ರಚನೆಯ ಮೊದಲ 7 ಮೀಟರ್ ಗಳೊಳಗೆ ಕಟ್ಟಡವನ್ನು ಗುರುತಿಸುವ ಸಲುವಾಗಿ ಹೆಚ್ಚುವರಿ ಗೋಡೆ ಚಿತ್ರನಕ್ಷೆಗಳನ್ನು ಸ್ಥಾಪಿಸಬಹುದು. ಆದರೆ ಈ ಚಿತ್ರನಕ್ಷೆಯು ಯಾವುದೇ ಕಿಟಕಿ ವ್ಯವಸ್ಥೆ ಅಥವಾ ವಿನ್ಯಾಸ ಅಂಶಗಳನ್ನು ಮುಚ್ಚುವಂತಿರಬಾರದು. ಕಟ್ಟಡ ಮುನ್ನೆಲದ ಪ್ರತಿ ಒಂದು ಮೀಟರ್ ರೇಖಾತ್ಮಕ ಮೀಟರ್ ಗೆ ಒಂದು ಚದರ ಮೀಟರ ಗರಿಷ್ಟ ಅಳತೆಯಾಗಿರುತ್ತದೆ ಮತ್ತು ಇದನ್ನು ಗೋಡೆ ಚಿತ್ರನಕ್ಷೆಯನ್ನು  ಸ್ಥಾಪಿಸುವ ಸ್ಥಳದ ಛಾವಣಿಸಾಲುಗಳ ಮೇಲೆ ಅಳತೆಮಾಡಲಾಗುತ್ತದೆ.

3.8.4.ಕಟ್ಟಡಗಳ ಮೇಲಿರುವ ಹಳೆಯ ಪೈಂಟ್ ಮಾಡಿದ ಚಿತ್ರಗಳನ್ನು ಗೋಡೆ ಚಿತ್ರನಕ್ಷೆಗಳೆಂದು ಪರಿಗಣಿಸಿ, ಈ ಅಗತ್ಯಗಳಿಮದ ಅವುಗಳನ್ನು ಹೊರತುಪಡಿಸಲಾಗಿದೆ ಮತ್ತು ಅವುಗಳಿಗೆ ಹೊಸ ಬಣ್ಣ ಹಚ್ಚಿ ರಿಪೇರಿ ಮಾಡಿ ಉತ್ತಮವಾಗಿ ನಿರ್ವಹಿಸುವವರೆಗೆ ಅವುಗಳು ಆನ್ವಯಿಕವಾಗಿವೆ ಎಂದೇ ಪರಿಗಣಿಸಲಾಗುತ್ತದೆ. ಆದರೆ, ಈಗಿರುವ ಗೋಡೆ ಚಿತ್ರನಕ್ಷೆಗಳಿಗೆ ಯಾವುದೇ ಹೊಸ ಮಾಹಿತಿ ಅಥವಾ ಚಿತ್ರವನ್ನು ಸೇರಿಸಬಾರದು.

3.8.5.1. ಗೋಡೆಚಿತ್ರವು, ಬಾಕ್ಸ್ ನಲ್ಲಿರುವ ಪ್ರದರ್ಶನವನ್ನು ಒಳಗೊಂಡಿದ್ದರೆ, ಪ್ರತಿ ಮತ್ತು ಹಿನ್ನೆಲೆ ಒಳಗೊಂಡಂತೆ, ಪ್ರದರ್ಶನದ ಒಟ್ಟೂ ವ್ಯಾಪ್ತಿ ಅನುಮತಿಸಲಾದ ಚಿತ್ರನಕ್ಷೆಯ ವ್ಯಾಪ್ತಿಯ ಗರಿಷ್ಟ ಶೇಕಡಾವಾರುವಿಗಿಂತ ಹೆಚ್ಚಾಗಿರಬಾರದು. 2. ಗೋಡೆ ಚಿತ್ರವು ಪ್ರತ್ಯೇಕ ಕಟ್ ಔಟ್ ಅಕ್ಷರಗಳನ್ನು  ಹೊಂದಿದ್ದರೆ, ಪ್ರತಿ ಅಕ್ಷರಕ್ಕೆ ತಗುಲಿಕೊಂಡಿರುವ ಮತ್ತು ಸುತ್ತುವರಿದಿರುವ ಕಾಲ್ಪನಿಕ ಆಯತಾಕಾರಗಳ ಒಟ್ಟೂ ವ್ಯಾಪ್ತಿಯನ್ನು ಮಾತ್ರ  ಚಿತ್ರನಕ್ಷೆಯಾಗಬಹುದಾದ ವ್ಯಾಪ್ತಿಎಂದು ಮಾಪಿಸಲಾಗುತ್ತದೆ. 3. ಯಾವುದೇ ಗೋಡೆ ಚಿತ್ರ, ಅದು ಹೊಂದಿಕೊಂಡಿರುವ ಕಟ್ಟಡದ ವಿನ್ಯಾಸವನ್ನು ಉಲ್ಲಂಘಿಸಬಾರದು. ಉದಾಹರಣೆಗೆ, ಬಾಕ್ಸ್ ಆಗಿರುವ ಚಿತ್ರಗಳು, ಕಾಲಮ್ ಗಳಿಗೆ ಅಡ್ಡವಾಗಿ ಕಟ್ ಆಗಬಾರದು.

3.8.6. ಬೀದಿ ಮುನ್ನೆಲವಿರುವ ಗೋಡೆ ಚಿತ್ರದ ಅಡಿಪಾಯದ ಎತ್ತರ ವಾಹನಚಾಲಕರಿಗೆ ಸುಲಭವಾಗಿ ಕಾಣಿಸುವ ರೀತಿಯಲ್ಲಿ ಭೂಮಿಯಿಂದ ಕನಿಷ್ಟ 2.2 ಮೀಟರ್ ಮೇಲಿರಬೇಕು.

3.8.7.ಗೋಡೆಚಿತ್ರಗಳನ್ನು ಕಟ್ಟಡದ ಗೋಡೆಗೆ ಸುರಕ್ಷಿತವಾಗಿ ಮತ್ತು ಭದ್ರವಾಗಿ ಹೊಂದಿಸಿರಬೇಕು. ಗೋಡೆ ಚಿತ್ರಗಳನ್ನು ಗೋಡೆಯ ಮೇಲೆ ಮಟ್ಟಸವಾಗಿ ನಿಲ್ಲಿಸಿದ್ದು, ಕಟ್ಟಡದ ಗೋಡೆಯಿಂದ 40 ಸೆಂ.ಮೀಗಿಂತ ಹೆಚ್ಚಿಗೆ ಚಾಚಿಕೊಂಡಿರಬಾರದು. ಗೋಡೆಚಿತ್ರಗಳು 40 ಸೆಂ.ಮೀ.ಗಿಂತ ಹೆಚ್ಚಿಗೆ ಸಾರ್ವಜನಿಕ ಹಕ್ಕುಮಾರ್ಗಗಳೊಳಗೆ ಅತಿಕ್ರಮಿಸಭಾರದು.

3.8.8.ಗೋಡೆಚಿತ್ರಗಳನ್ನು ಆಂತರಿಕವಾಗಿ ಅಥವಾ ಬಾಹ್ಯವಾಗಿ ದೀಪ್ತಗೊಳಿಸಿರಬಹುದು. ಬಾಹ್ಯವಾಗಿ ದೀಪ್ತಗೊಳಿಸಿದ್ದಲ್ಲಿ, ಎಲ್ಲಾ ಬೆಳಕು, ಚಿತ್ರದ ಮುಖಭಾಗಕ್ಕೆ ನೇರವಾಗಿ ಬೀಳುವಂತಿರಬೇಕು.

3.8.9.ಗೋಡೆಚಿತ್ರಗಳನ್ನು ಜಾರಿಯಲ್ಲಿರುವ ಬೈಲಾಗಳು ಮತ್ತು ಅಗ್ನಿ ಸುರಕ್ಷತಾ ನಿಯಮಗಳಲ್ಲಿ ಅನುಮತಿಸಲಾಗಿರುವ ವಸ್ತುಗಳನ್ನು ಉಪಯೋಗಿಸಿ ತಯಾರಿಸಿರಬೇಕು.

3.8.10.ಚಿತ್ರನಕ್ಷೆಯ ಆಧಾರ ರಚನೆಯೂ ಒಳಗೊಂಡಂತೆ, ಕಟ್ಟಡಕ್ಕೆ ಹೊಂದಿಕೊಂಡ ಯಾವುದೇ ಗೋಡೆ ಚಿತ್ರವು, ಅದು ಹೊಂದಿಕೊಂಡಿರುವ ರಚನೆಯ ಛಾವಣಿಸಾಲಿಗಿಂತ ಎತ್ತರದಲ್ಲಿ ಅಥವಾ ಗೋಡೆಯ ಮೇಲ್ಭಾಗದಲ್ಲಿ ಅಥವಾ ಅಂಚುಗಳಾಚೆ ಚಾಚಿಕೊಂಡಿರಬಾರದು.

3.8.11.ಗೋಡೆಚಿತ್ರಗಳನ್ನು ಕಟ್ಟಡ ರಚನೆಯ ಭಾಗವಾಗಿರುವ ಚಿಮ್ನಿಗಳು ಮತ್ತು ಪೆಂಟ್ ಹೌಸ್ ನಂತಹ ವಿನ್ಯಾಸ ಉಪಸಲಕರಣೆಗಳ ಮೇಲೆ ಅನುಮತಿಸಲಾಗಿದೆ.

**3.9.ಛಾವಣಿ–ಗೋಡೆಚಿತ್ರಗಳು**

3.9.1.ಛಾವಣಿ– ಗೋಡೆಚಿತ್ರಗಳನ್ನು ವಲಯ 1,2 ಮತ್ತು3ರಲ್ಲಿ ಇರುವ ನಿವಾಸಗಳಲ್ಲಿ ನಿವಾಸೇತರ ಬಳಕೆಗೆ ಅನುಮತಿಸಲಾಗುತ್ತದೆ

3.9.2. ಪ್ರತಿ ಕಟ್ಟಡಕ್ಕೆ ಕೇವಲ ಒಂದು ಛಾವಣಿ–ಗೋಡೆಚಿತ್ರಕ್ಕೆ ಅನುಮತಿ ನೀಡಲಾಗುತ್ತದೆ. ಮಟ್ಟಸವಾದ ಛಾವಣಿ ಇರುವ ಕಟ್ಟಡಗಳಿಗೆ ಮಾತ್ರ ಛಾವಣಿಚಿತ್ರಕ್ಕೆ ಅನುಮತಿ ನೀಡಲಾಗುತ್ತದೆ.

3.9.3.ಛಾವಣಿ ಚಿತ್ರನಕ್ಷೆಗಳು ಗರಿಷ್ಟ 12 ಚದರಮೀಟರುಗಳ ಚಿತ್ರನಕ್ಷೆ ವ್ಯಾಪ್ತಿಗೆ ಸೀಮಿತವಾಗಿರುತ್ತವೆ.

3.9.4.ಛಾವಣಿ ಚಿತ್ರನಕ್ಷೆಗಳು ಭೂಮಿಯಿಂದ 7 ಮೀಟರ್‌ಗಿಂತ ಕಡಿಮೆ ಅಂತರದಿಂದ ಆರಂಭವಾಗಬೇಕು.

3.9.5.ಛಾವಣಿ ಚಿತ್ರನಕ್ಷೆಗಳ ಎತ್ತರ ಗರಿಷ್ಟ 4 ಮೀಟರ್ ಗೆ ಸೀಮಿತವಾಗಿದ್ದು, ಚಿತ್ರನಕ್ಷೆಯ ರಚನೆ ಒಳಗೊಂಡಂತೆ, ಕಟ್ಟಡರಚನೆಯ ಛಾವಣಿಯಿಂದ ಹಿಡಿದು ಚಿತ್ರನಕ್ಷೆಯ ಅತ್ಯುಚ್ಚ ಎತ್ತರದವರೆಗೆ ಅಳೆಯಲಾಗುತ್ತದೆ.

3.9.6.೦ ಛಾವಣಿಚಿತ್ರನಕ್ಷೆಯನ್ನು ಛಾವಣಿಯ ಅತ್ಯಂತ ಹೊರಭಾಗದ ಗೋಡೆಗಳಿಂದ ಕನಿಷ್ಟ ಮೂರು ಅಡಿಗಳ ದೂರದಲ್ಲಿ ನಿರ್ಮಿಸಿರಬೇಕು.

3.9.7.ಛಾವಣಿಚಿತ್ರನಕ್ಷೆಗಳು ಛಾವಣಿಯ ರಚನೆಗೆ ಸುರಕ್ಷಿತವಾಗಿ ಮತ್ತು ಸುಭದ್ರವಾಗಿ ಹೊಂದಿಕೊಂಡಿದ್ದು, ಯಾವುದೇ ಛಾವಣಿಯ ಪ್ರವೇಶ ಮಾರ್ಗಗಳಿಗೆ ಅಡ್ಡ ಬರಬಾರದು.

3.9.8.ಛಾವಣಿಚಿತ್ರನಕ್ಷೆಗಳನ್ನು ಆಂತರಿಕವಾಗಿ ಅಥವಾ ಬಾಹ್ಯವಾಗಿ ದೀಪ್ತಗೊಳಿಸಬಹುದು ಮತ್ತು ಇವು ನಿಯಾನ್ ಅಥವಾ ಎಲ್ ಇ ಡಿ ಅಂಶಗಳನ್ನು ಒಳಗೊಂಡಿರಬೇಕು.

**3.10.ವಾಹನ ಚಿತ್ರನಕ್ಷೆಗಳು**

3.10.1.ಒಂದು ಉತ್ಪನ್ನ ಅಥವಾ ಸೇವೆಯನ್ನು ಜಾಹೀರಾತು ಮಾಡಲು ಅಥವಾ ನಿವೇಶನದ ಒಳಗೆ ಅಥವಾ ಅದರಾಚೆ ಒಂದು ವ್ಯಾಪಾರ ಅಥವಾ ಚಟುವಟಿಕೆಗೆ ಸಾರ್ವಜನಿಕರನ್ನು ನಿರ್ದೇಶಿಸುವ ಸಲುವಾಗಿ ನಿಲುಗಡೆ ಮಾಡಿರುವ ವಾಹನಗಳ ಮೇಲೆ ಇರಿಸಲಾಗುವ ಅಥವಾ ಪೈಂಟ್ ಮಾಡಲಾಗಿರುವ ಚಿತ್ರನಕ್ಷೆಗಳನ್ನು ನಿಷೇಧಿಸಲಾಗಿದೆ. ವ್ಯಾಪಾರದ ಸಾಧಾರಣ ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವ ಅಥವಾ ಶೇಖರಗೊಂಡಿರುವ, ಅಂದರೆ, ಡೆಲಿವರಿ ಟ್ರಕ್ಕುಗಳು, ಪ್ರಚಾರ ವಾಹನಗಳು, ಚಲಿಸುತ್ತಿರುವ ವ್ಯಾನುಗಳು, ಮತ್ತು ಬಾಡಿಗೆ ಟ್ರಕ್ಕುಗಳಂತಹ ವಾಹನಗಳು, ಟ್ರಕ್ಕುಗಳು ಅಥವಾ ಬಸ್ಸುಗಳ ಮೇಲೆ ಚಿತ್ರನಕ್ಷೆಗಳನ್ನು ಪೈಂಟ್ ಮಾಡಬಹುದು. ಆದರೆ, ಈತಹ ವಾಹನಗಳ ಪ್ರಾಥಮಿಕ ಉದ್ದೇಶವು ಚಿತ್ರನಕ್ಷೆಯ ಪ್ರದರ್ಶನವಾಗಿರಬಾರದು ಮತ್ತು ವಾಹನಗಳಾಗಿ ಅವುಗಳ ಉಪಯುಕ್ತತೆಗೆ ಸಂಬಂಧಿಸಿದಂತೆ ಅವುಗಳನ್ನು ನಿಲುಗಡೆಮಾಡಿರಬೇಕು ಅಥವಾ ಶೇಖರಿಸಿರಬೇಕು ಮತ್ತು ಎಲ್ಲಾ ವಾಹನಗಳೂ ಚಲಾವಣೆಸ್ಥಿತಿಯಲ್ಲಿರಬೇಕು.

**3.11.ಪ್ರಾಯೋಜಿತ ಜಾಹೀರಾತುಗಳು**

3.11.1.ವಿವರಣೆ: ನಿರ್ದಿಷ್ಟ ಸಾರ್ವಜನಿಕ ಮೂಲಭೂತ ಸೌಕರ್ಯಗಳಿಗಾಗಿ ಖಾಸಗಿ ವ್ಯಾಪಾರಗಳು, ದಾನಿಗಳು ಅಥವಾ ವ್ಯಕ್ತಿಗಳಿಂದ ಹಣಕಾಸು ನೆರವು ಪಡೆಯಬಹುದಾಗಿದೆ. ಪ್ರಾಯೋಜಿಸುತ್ತಿರುವ ವ್ಯಕ್ತಿ, ಸಂಸ್ಥೆಯ ಹೆಸರು, ದಿನಾಂಕ, ಸಾರ್ವಜನಿಕ ಸಂದೇಶವನ್ನು ಒಳಗೊಂಡ ಸ್ಮರಣಾರ್ಥ ಫಲಕವನ್ನು ಪ್ರದರ್ಶಿಸಲು ಅನುಮತಿ ಇದೆ. ಪ್ರಾಯೋಜನವು , ಪ್ರಾಯೋಜಕತ್ವವು ನಿರ್ದಿಷ್ಟವಾಗಿ ಪ್ರಾಯೋಜಕರಿಗೆ ನೀಡಲಾಗುವ ನಿರ್ದಿಷ್ಟ ಮೂಲಭೂತ ಸೌಕರ್ಯ ಜಾಹೀರಾತು ಹಕ್ಕುಗಳಿಗೆ ಬದಲಾಗಿ ಇರಬಹುದು. ಕೆಳಕಂಡ ಮೂಲಭೂತ ಸೌಕರ್ಯಗಳು ಅನುಮತಿಸಲಾದ ಪ್ರಾಯೋಜಿತ ಜಾಹೀರಾತುಗಳಾಗಿರುತ್ತವೆ :

**3.11.2.ಬಸ್ ತಂಗುದಾಣ**

3.11.2.1.ಬಸ್ ತಂಗುದಾಣಗಳಿಗೆ ವಾಣಿಜ್ಯ ಚಿತ್ರನಕ್ಷೆ ಪ್ರಾಯೋಜಕತ್ವವನ್ನು ಅನುಮತಿಸಲಾಗುತ್ತದೆಯಾದರೂ, ಹಕ್ಕುಮಾರ್ಗದ ಒಂದೇ ಬದಿಯಲ್ಲಿ, ಪ್ರತಿ 300 ಮೀಟರುಗಳಿಗೆ ಒಂದಕ್ಕಿಂತ ಹೆಚ್ಚಿನ ಬಸ್ ತಂಗುದಾಣಕ್ಕೆ ಅನುಮತಿ ಇರುವುದಿಲ್ಲ. ಮೂಲಭೂತ ಸೌಕರ್ಯದ ವೆಚ್ಚದ ಆಧಾರದ ಮೇಲೆ ಪ್ರಾಧಿಕಾರವು ಅನುಮತಿ(ಪರವಾನಗಿ)ಮೂಲ್ಯವನ್ನು ಲೆಕ್ಕಹಾಕುತ್ತದೆ.

3.11.2.2. ಜಾಹೀರಾತು ನೆಲದಿಂದ 2.5 ಮೀಟರುಗಳಿಗಿಂತ ಹೆಚ್ಚಿನ ಎತ್ತರಕ್ಕೆ ಇರಬಾರದು.

3.11.2.3.ಬಸ್ ನಿಲ್ದಾಣದ ಛಾವಣಿಯಾಚೆ ಚಾಚಿಕೊಂಡಿರಬಾರದು.

3.11.2.4.ಒಟ್ಟೂ ಮೇಲ್ಮೈ ಹರವು, ತಂಗುದಾಣದ ಒಳಾಂಗಣ ಲಂಬ ಮೇಲ್ಮೈನ ಶೇಕಡ ಎಪ್ಪತ್ತಕ್ಕಿಂತ ಹೆಚ್ಚಿಗೆ ಇರಬಾರದು

**3.11.3.ಪಾದಚಾರಿ ಸೇತುವೆಗಳು ಮತ್ತು ಕೆಳದಾರಿಗಳು(ಅಂಡರ್ ಪಾಸ್)**

ಜಾಹೀರಾತು ಹಕ್ಕುಗಳ ಪ್ರಸ್ತುತ ಗುತ್ತಿಗೆಯನ್ನು ಪರಿಗಣಿಸಬೇಕು. ಆದರೆ, ಪಾದಚಾರಿ ಸೇತುವೆಗಳು ಮತ್ತು ಕೆಳದಾರಿಗಳ ಮೇಲಿನ ಎಲ್ಲಾ ಭವಿಷ್ಯತ್ತಿನ ಪ್ರಾಯೋಜಿತ ಜಾಹೀರಾತುಗಳನ್ನು ಕೆಳಕಂಡಂತೆ ಅನುಮತಿಸಲಾಗುತ್ತದೆ:

3.11.3.1.ಪಾದಚಾರಿಗಳಿಗೆ ಗೋಚರತೆಯನ್ನು ಸೀಮಿತಗೊಳಿಸುತ್ತದೆ ಆದರೆ ಸಾರ್ವಜನಿಕ ಹಕ್ಕುಮಾರ್ಗದಿಂದ ನೋಡಲಾಗುವುದಿಲ್ಲ.

3.11.3.2.ಚಿತ್ರನಕ್ಷೆಯ ಹರವಿನ ಗರಿಷ್ಟ ಮೇಲ್ಮೈ ವ್ಯಾಪ್ತಿ ಕಟ್ಟಡ ರಚನೆಯ ಒಟ್ಟೂ ಗೋಡೆ/ಲಂಬವ್ಯಾಪ್ತಿಯ 50% ಇರುತ್ತದೆ.

3.11.3.3.ಚಿತ್ರನಕ್ಷೆಯ ನಡುವಣ ಅಂತರವು, ಚಿತ್ರನಕ್ಷೆಯ ಕನಿಷ್ಟ ಅಗಲದಷ್ಟಿರಬೇಕು.

3.11.3.4.ಚಿತ್ರನಕ್ಷೆಯು ನೆಲದ ಮಟ್ಟದಿಂದ ಕನಿಷ್ಟ 30 ಸೆಂ.ಮೀ. ಮೇಲೆ ಇದ್ದು ಸೀಲಿಂಗ್ ಎತ್ತರದಿಂದ ಕನಿಷ್ಟ 30 ಸೆಂ.ಮೀ ಇರಬೇಕು. 3.11.3.5.ಚಿತ್ರನಕ್ಷೆಗೆ ಹಿನ್ನಲೆ ಎಲ್ ಇ ಡಿ ಬೆಳಕು ಇರಬಹುದು

3.11.4. **ಇ–ಶೌಚಾಲಯಗಳು:** ಪ್ರಾಯೋಜಿತ ಜಾಹೀರಾತುಗಳನ್ನು ಇ–ಶೌಚಾಲಯಗಳ ಮೇಲೆ ಅನುಮತಿಸಲಾಗಿದ್ದು ಇವುಗಳ ಗರಿಷ್ಟ ಹರವು ಇ–ಶೌಚಾಲಯದ ಮೇಲ್ಮೈನ 25%ನಷ್ಟಿರಬೇಕು.

3.11.5. ಸಾರ್ವಜನಿಕ ಉದ್ಯಾನಗಳು, ಮನರಂಜನಾ ಮೈದಾನಗಳ ಚಿತ್ರನಕ್ಷೆ, ಬೀದಿ ಪೀಠೋಪಕರಣ, ಸಾರ್ವಜನಿಕ ಕಲೆ, ಕ್ರೀಡಾಂಗಣಗಳು ಮತ್ತು ಕ್ರೀಡಾ ಅಖಾಡಗಳು: ಪ್ರತಿಯೊಂದು ಬಳಕೆಗೂ ಪ್ರಾಯೋಜಕತ್ವ ಫಲಕ ಅನುಮತಿಸಲಾಗಿದ್ದು, ಇವುಗಳ ವಿನ್ಯಾಸ ಹಾಗು ಸಂದೇಶ ಪರಿಸರವನ್ನು ವರ್ಧಿಸುವುದನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಇವುಗಳನ್ನು ವೈಯಕ್ತಿಕವಾಗಿ, ಪರಿಶೀಲನಾ ಸಮಿತಿ ಮತ್ತು ಹೆಚ್ಚುವರಿ ತತ್ಸಂಬಂಧಿತ ಪ್ರಾಧಿಕಾರಗಳಿಂದ ಪರಿಶೀಲಿಸಬಹುದಾಗಿದೆ.

## *4.ವಿನ್ಯಾಸ ಹಾಗು ನಿರ್ಮಾಣ ಮಾನದಂಡಗಳು*

4.1 ಎಲ್ಲಾ ಚಿತ್ರನಕ್ಷೆಗಳನ್ನೂ ಕಟ್ಟಡ ಮತ್ತು ಅಗ್ನಿ ಕೋಡ್ ಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಿ ನಿರ್ಮಿಸಿರಬೇಕು.

4.2 ಕಟ್ಟಡದ ಮುನ್ನೆಲಕ್ಕೆ ಗಣನೀಯ ಹಾನಿಯಾಗದ ರೀತಿಯಲ್ಲಿ ತೆಗೆಯುವಂತಾಗಲು, ಎಲ್ಲಾ ಚಿತ್ರನಕ್ಷೆಗಳನ್ನೂ ಕಲ್ಲುಕಟ್ಟಡಗಳಿಗೆ ಕಟ್ಟಿರಬೇಕು. ಈ ಹೊಂದಿಕೆಗಳನ್ನು ಗಾರೆ ಸಂದುಗಳಲ್ಲಿ ಮಾಡಿರಬೇಕೇ ಹೊರತು ಕಲ್ಲಿನ ಘಟಕಟಗಳ ಮೇಲ್ಮೈಗಳಿಗಲ್ಲ.

4.3 ಚಿತ್ರನಕ್ಷೆಯ ಭಾಗವಾಗಿರುವ ಗಾಜಿನ ರಚನೆಯು ಸುರಕ್ಷಿತ ಗಾಜಾಗಿರಬೇಕು.

4.4 ಕಟ್ಟಡಕ್ಕೆ ಹೊಂದಿಸಲಾಗಿರುವ ಎಲ್ಲಾ ಚಿತ್ರನಕ್ಷೆಗಳನ್ನು, ಗೋಡೆಭೇದನವು ಜಲಾಭೇದ್ಯವಾಗಿದ್ದು ಕಟ್ಟಡರಚನೆಯು, ಆಧಾರವಾಗಿರುವ ವಸ್ತುಗಳ ಅಂಗೀಕಾರಾರ್ಹ ಒತ್ತಡಗಳನ್ನು ಮೀರದಿರುವ ರೀತಿಯಲ್ಲಿ ಅನುಷ್ಠಾನಗೊಳಿಸಿ ಉತ್ತಮವಾಗಿ ನಿರ್ವಹಿಸಿರಬೇಕು.

4.5 ಆಧಾರಗಳು ಮತ್ತು ಪಟ್ಟಿಗಳನ್ನು ಒಟ್ಟಾರೆ ಚಿತ್ರನಕ್ಷೆ ವಿನ್ಯಾಸದ ಅವಿಭಾಜ್ಯ ಅಂಗವಾಗಿರುವಂತೆ ವಿನ್ಯಾಸಗೊಳಿಸಿರಬೇಕು ಮತ್ತು ತಾಂತ್ರಿಕವಾಗಿ ಸಾಧ್ಯವಿರುವ ಮಟ್ಟಿಗೆ ಸಾರ್ವಜನಿಕ ದೃಷ್ಟಿಯಿಂದ ಮರೆಯಾಗಿರಬೇಕು.

4.60 ಯಾವುದೇ ಚಿತ್ರನಕ್ಷೆಯ ಮೇಲೆ ಶ್ರವಣ ಸಾಧನಗಳನ್ನು ನಿಷೇಧಿಸಲಾಗಿದೆ.

4.7 ಯಾವುದೇ ಚಿತ್ರನಕ್ಷೆಗೆ ಸಂಯೋಜಿತವಾಗಿರುವ, ಹೊಂದಿಕೊಂಡ ಅಥವಾ ಅದರ ಮೇಲೆ ಅಧ್ಯಾರೋಪಣಗೊಂಡಿರುವ ಎಲ್ಲಾ ಅಕ್ಷರಗಳು, ಚಿತ್ರಗಳು, ಪಾತ್ರಗಳು, ಅಥವಾ ಕಟ್ ಔಟ್ ಅಥವಾ ಅಸಮರ್ಪಕ ರೂಪದಲ್ಲಿರುವ ಪ್ರತಿನಿಧಿತ್ವಗಳನ್ನು ಚಿತ್ರನಕ್ಷೆಯ ರಚನೆಯೊಳಗೆ ಅಥವಾ ಅದಕ್ಕೆ ಹೊಂದಿಕೊಂಡಂತೆ ಸುರಕ್ಷಿತವಾಗಿ ಮತ್ತು ಭದ್ರವಾಗಿ ನಿರ್ಮಿಸಿರಬೇಕು.

4.8 ಯಾವುದೇ ಚಿತ್ರನಕ್ಷೆಯನ್ನು ದೀಪ್ತಗೊಳಿಸಲು, ಚಲಿಸಲು ಅಥವಾ ಚಾಚಿಕೊಂಡಿರುವಂತೆ ಮಾಡಲು ಬಳಸುವ ಎಲ್ಲಾ ವಿದ್ಯುತ ಅಳವಡಿಕೆಗಳು, ಉಪಕರಣಗಳು, ಸರ್ಕ್ಯೂಟ್ ಗಳು, ಕಾಂಡ್ಯೂಟ್ ಗಳು, ರೇಸ್ ವೇಗಳು, ಅಥವಾ ಸಲಕರಣೆಗಳನ್ನು, ಕಟ್ಟಡದ ಕೋಡ್

ಮತ್ತು ವಿದ್ಯುತ್ ಕೋಡ್ ಗೆ ಅನುಸಾರವಾಗಿ ಅನುಷ್ಠಾನಗೊಳಿಸಿ ನಿರ್ವಹಿಸಬೇಕು. ವಿದ್ಯುತ್ ಭಾಗವಿರುವ ಚಿತ್ರನಕ್ಷೆಗಳಿಗೆ ವಿದ್ಯುತ್ ಪರವಾನಗಿ ಅಗತ್ಯವಾಗುತ್ತದೆ.

4.9 ಚಿತ್ರನಕ್ಷೆ ದೀಪಾಲಂಕಾರ ವ್ಯವಸ್ಥೆಯ ಕಾಂಡ್ಯೂಟ್ ಗಳು ಮತ್ತು ಇತರ ಭಾಗಗಳು, ಒಟ್ಟಾರೆ ಚಿತ್ರನಕ್ಷೆ ರಚನೆಯ ಅವಿಭಾಜ್ಯ ಅಂಗವಾಗಿರುವಂತೆ ವಿನ್ಯಾಸಗೊಳಿಸಿರಬೇಕು ಮತ್ತು ತಾಂತ್ರಿಕವಾಗಿ ಸಾಧ್ಯವಿರುವ ಮಟ್ಟಿಗೆ ಸಾರ್ವಜನಿಕ ದೃಷ್ಟಿಯಿಂದಮರೆಯಾಗಿರಬೇಕು.

4.10 ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳು, ಆ ರೀತಿ ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳ ಮೇಲ್ಮೈನ 2.5 ಪಟ್ಟು ಪರಿಮಾಣದಲ್ಲಿರುವ ಹೊರಮೈಯ ದೃಶ್ಯವನ್ನು ಒದಗಿಸಬೇಕು. ನೆಡುವಿಕೆಯು ಶಾಶ್ವತವಾಗಿದ್ದು, ಸ್ವತಂತ್ರವಾಗಿ ನಿಲ್ಲುವ ಚಿತ್ರನಕ್ಷೆಗಳು ಮತ್ತು ಅದರೊಂದಿಗೆ ಇರುವ ಮುನ್ನೆಲವನ್ನು ನಿರ್ವಹಿಸಿ, ಅದನ್ನು ಕಲಾತ್ಮಕ ಚೌಕಟ್ಟಿನೊಳಗಿರಿಸಿ ಅದು ಎದ್ದು ಕಾಣುವಂತೆ ಮಾಡಬೇಕು.

## *ಪಿತ್ರಾರ್ಜಿತ ಆಸ್ತಿಯ ಪ್ರದರ್ಶನಕ್ಕೆ ಪರಿಗಣನೆಗಳು*

5.1 ಮಾರ್ಪಡಿಸಿದ್ದರೆ, ಪುನರ್ ನಿರ್ಮಾಣವಾಗಿದ್ದರೆ, ಸ್ಥದಲಾಯಿಸಿದ್ದರೆ, ವಿಸ್ತರಿಸಿದ್ದರೆ ಅಥವಾ ಸ್ಥಳಾಂತರಿಸಲ್ಪಟ್ಟಿದ್ದರೆ, ಬೀದಿ ಸ್ವ-ಜಾಹಿರಾತು ಅಥವಾ ಜಾಹಿರಾತು ಪ್ರದರ್ಶಿಸಲ್ಪಡುವ ಕಟ್ಟಡ/ರಚನೆಯು ಅನುಸರಣೆಯಾಗಿಲ್ಲದಿದ್ದರೆ, ಈ ನೀತಿಯೊಂದಿಗೆ ಅನುಸರಣೆ ವ್ಯಾಪ್ತಿಗೆ ಬರುತ್ತದೆ. ಈ ಉಪಖಂಡದ ಉದ್ದೇಶಗಳಿಗಾಗಿ ಕೇವಲ ವಸ್ತುನಿಷ್ಠವಾಗಿ ಬದಲಾವಣೆಯಾಗಿದ್ದರೆ ಅಥವಾ ಸ್ಥಳಾಂತರಗೊಂಡಿದ್ದ, ಅದು ಮಾರ್ಪಾಟು ಎನಿಸಿಕೊಳ್ಳುವುದಿಲ್ಲ .

5.2 ಈ ನೀತಿಯಡಿ, ಪ್ರಸಕ್ತ ಚಾಲ್ತಿಯಲ್ಲಿರುವ ಸ್ವ ಜಾಹಿರಾತು ಸೆಟ್ ಬ್ಯಾಕ್, ಎತ್ತರ ಮತ್ತು ಗಾತ್ರಕ್ಕೆ ಸಂಬಂಧಿಸಿ ಅವಶ್ಯಕತೆಗಳು 10% ಗಿಂತ ಹೆಚ್ಚು ಮೀರಿದ್ದರೆ, ಅದು ನೀತಿಯ ಅನುಸರಣೆಯಾಗಿದೆ ಎಂದು ಪರಿಗಣಿಸಲಾಗುತ್ತದೆ. ಪ್ರಸಕ್ತ ಚಾಲ್ತಿಯಲ್ಲಿರುವ ಸ್ವ ಜಾಹಿರಾತುಗಳು ಅಕ್ಕಪಕ್ಕದ ಫಲಕ, ಪಥ್ಯದ ಎತ್ತರ, ಪಥ್ಯದ ಮಾದರಿಯ ವಿಪಥನಗಳಿಗೆ ಸಂಬಂಧಿಸಿದಂತೆ ಅಂತರದ ವಿಪಥನವನ್ನು ಪರಭಾರೆಯ ನಿರ್ದಿಷ್ಟ ಕಾಲಾವಧಿಗೆ ಅನುಸರಣೆಯಾಗಿದೆ ಎಂದು ಪರಿಗಣಿಸಲಾಗುವುದು. ಫಲಕದ ರಚನೆ ಅಥವಾ ಗ್ರಾಫಿಕ್‌ನಲ್ಲಿ ಬದಲಾವಣೆಯಾಗಿದ್ದರೆ, ಈ ನೀತಿಯಡಿಯ ಎಲ್ಲಾ ಅವಶ್ಯಕತೆಗಳಿಗೆ ಬದ್ಧವಾಗಿರತಕ್ಕದ್ದು.

5.3 ನಗರಸಭೆಯು ಅನುಸರಣಾ ಪ್ರಮಾಣಪತ್ರ ನೀಡುತ್ತದೆ ಮತ್ತು ಈ ನೀತಿಯಡಿ ರಕ್ಷಣೆ ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ನಗರಸಭೆಯ ಹೊರಾಂಗಣ ಫಲಕ ಪ್ರದರ್ಶನ ರಿಜಿಸ್ಟರ್‌ನಲ್ಲಿ ಸೇರಿಸಲಾಗುತ್ತದೆ.

5.4 ಸದುದ್ದೇಶದಿಂದ ಪಾವತಿಸಲಾದ ಪ್ರಾಯೋಜಿತ ಸಾರ್ವಜನಿಕ ಮೂಲಭೂತಸೌಕರ್ಯದ ಮೇಲಿನ ಜಾಹಿರಾತು ಹಕ್ಕುಗಳು, ಅನುಸರಣೆಯ ವ್ಯಾಪ್ತಿಗೆ ಬರುವಂತೆ ಪರ್ಯಾಯವಾಗಿ ಅನ್ವಯಿಸಲಾಗುತ್ತದೆ. ಆದರೆ, ಪ್ರಸಕ್ತ ಚಾಲ್ತಿಯಲ್ಲಿರುವ ಹಕ್ಕುಗಳನ್ನು ಐದು ವರ್ಷದ ಅವಧಿಯವರೆಗೆ ಮಾನ್ಯವಾಗಿರುತ್ತದೆ. ಈ ಅವಧಿ ಮುಗಿದ ನಂತರ, ಹೊಸ ಉಪಬಂಧಗಳಿಗೆ ಬದ್ಧವಾಗಿರುವಂತೆ ಈ ಹಕ್ಕುಗಳನ್ನು ಮರುನಿಯೋಜಿಸಲಾಗುತ್ತದೆ ಅಥವಾ ಚಾಲ್ತಿಯಲ್ಲಿರುವುದಿಲ್ಲ..

## *6.. ದೀಪ ವ್ಯವಸ್ಥೆ ಮತ್ತು ಡಇನಾಮಿಕ್ ದೀಪ ಪ್ರದರ್ಶನಗಳು*

**6.1 ವಿವರಣೆ**

ಬೆಳಕಿನ ಮೂಲವು ಆಂತರಿಕ, ಬಾಹ್ಯ ಅಥವಾ ಪರೋಕ್ಷ ರೂಪದ್ದಾಗಿರಬಹುದು. ಆಂತರಿಕ ದೀಪಬೆಳಗುವ ವ್ಯವಸ್ಥೆ ಎಂದರೆ ಪಾರದರ್ಶಕ ಮೇಲ್ಮೈ ಮೂಲಕ ಬೆಳಕನ್ನು ಪ್ರಕ್ಷೇಪಿಸುವ ಮೂಲಕ ರಾತ್ರಿ ವೇಳೆಯಲ್ಲಿ ಗ್ರಾಫಿಕ್ ಕಾಣುವಂತೆ ಗ್ರಾಫಿಕ್‌ನ ಅಂತರ್ಗತ ಭಾಗವಾಗಿ ಒಳಗೊಂಡ ದೀಪ ವ್ಯವಸ್ಥೆ. ಬಾಹ್ಯ ಬೆಳಕಿನ ವ್ಯವಸ್ಥೆ ಎಂದರೆ ಗ್ರಾಫಿಕ್‌ನಿಂದ ಹೊರಗೆ ಪ್ರತ್ಯೇಕವಾಗಿ ಮಾಡಲ್ಪಟ್ಟಿರುವ ದೀಪದ ವ್ಯವಸ್ಥೆ. .

**6.2 ದೀಪ ವ್ಯವಸ್ಥೆಗೆ ಅವಶ್ಯಕತೆಗಳು:**

ಹೊರಾಂಗಣ ಫಲಕ ಮತ್ತು ಸಾರ್ವಜನಿಕ ಸಂದೇಶ ಪ್ರಸರಣಕ್ಕೆ ದೀಪ ವ್ಯವಸ್ಥೆ ಅನುಮೋದನೆಗಳು ಈ ಕೆಳಗಿನಂತಿವೆ :

6.2.1 ಎಲ್ಲಾ ದೀಪ ಕಂಬಗಳ ಸ್ಥಾಪನೆ ಸ್ಥಳ, ಕಟ್ಟಡದ ಮೇಲೆ ಅಳವಡಿಸಲಾದ ದೀಪಗಳು, ಬಿಗಿಕಂಬ ದೀಪಗಳು ಹಾಗೂ ಇತರ ಎಲ್ಲಾ ಬಗೆಯ ದೀಪಗಳನ್ನು ಅವುಗಳ ವೈರಿಂಗ್ ಲೇ ಔಟ್ ಮತ್ತು ವಿದ್ಯುಚ್ಛಕ್ತಿ ಸರಬರಾಜು ಮೂಲವನ್ನು ತೋರಿಸುವ ನಕ್ಷೆ ಇರಬೇಕು.

6.2.2 ಉದ್ದೇಶಿತ ದೀಪ ವ್ಯವಸ್ಥೆಯ ಫಿಕ್ಸ್ಚರ್‌ಗಳ ಛಾಯಾಚಿತ್ರ ಅಥವಾ ರೇಖಾಚಿತ್ರಗಳು ಸೇರಿದಂತೆ ದೀಪಗಳು ಹಾಗೂ ದೀಪಗಳ ಮಾದರಿ, ಕಂಬಗಳು, ವೈರಿಂಗ್, ಕಾಂಡ್ಯೂಟ್ ಮತ್ತು ಅಂಗಭೂತ ನಿರ್ಮಾಣಗಳ ವಿನಿರ್ದೇಶನಗಳು.

6.2.3 ಸ್ವತ್ತಿನ ಎಲ್ಲಾ ವಿದ್ಯುತ್ ಮಾರ್ಗಗಳಲ್ಲಿ ಫುಟ್ ಕ್ಯಾಂಡಲ್ ಮಾಪನವನ್ನು ತೋರಿಸುವ ಫೋಟೋಮೆಟ್ರಿಕ್ ನಕ್ಷೆಗಳು.

6.2.4 ಕಂಬದ ಎತ್ತರ, ಕಟ್ಟಡದ ಮೇಲೆ ಅಳವಡಿಸಿದ ದೀಪಗಳ ಎತ್ತರ, ಸ್ಥಾಪಿತ ಎತ್ತರ,ಮತ್ತು ದೀಪದ ಎತ್ತರ ಒಳಗೊಂಡಂತೆ ಕಂಬ, ದೀಪ ಮತ್ತು ಅಡಿಪಾಯಗಳ ವಿವರಗಳು. .

6.2.5 ಅವಶ್ಯ ದೀಪ ವ್ಯವಸ್ಥೆ ನಕ್ಷೆ/ಯೋಜನೆಯ ಮೌಲ್ಯಮಾಪನ ಮಾಡಲು ಸಕಾರಣವಾಗಿ ಅವಶ್ಯವಾಗುವ ಇತರ ಮಾಹಿತಿ ಮತ್ತು ದತ್ತಾಂಶ..

6.2.6 ಎಲ್ಲಾ ದೀಪಗಳ ಒಟ್ಟು ಕಟ್ ಆಫ್ ಕೋನ ನಿರ್ಧರಿಸಲು ಸಾಕಾಗುವಷ್ಟು ಮತ್ತು ಅಕ್ಕಪಕ್ಕದ ಪ್ರದೇಶಗಳಿಗೆ ಸಂಬಂಧಿಸಿದಂತೆ ಎಲ್ಲಾ ಕಟ್ಟಡ, ರಚನೆ ಮತ್ತು ದೀಪಗಳು ಸೇರಿದಂತೆ ನಿವೇಶನದ ಎಲಿವೇಷನ್..

**6.3 ಗರಿಷ್ಠ ದೀಪ ವ್ಯವಸ್ಥೆ ನಿಯಂತ್ರಣಗಳು**

6.3.1 ಯಾವುದೇ ಸ್ವತ್ತಿನ ವಿದ್ಯುತ್ ಮಾರ್ಗದಲ್ಲಿ ಅನುಮತಿಸಲಾದ ಗರಿಷ್ಟ ಬೆಳಕಿನ ಮಟ್ಟ ಒಂದು ಫುಟ್ ಕ್ಯಾಂಡಲ್ ಆಗಿರುತ್ತದೆ..

6.3.2 ಅಕ್ಕಪಕ್ಕದ ಸ್ವತ್ತುಗಳ ಮೇಲೆ ಬೆಳಕು ಚೆಲ್ಲುವುದನ್ನು ಅನುಮತಿಸಲಾಗುವುದಿಲ್ಲ..

**6.4 ದೀಪಗಳಿಗೆ ಮಾನಕಗಳು**

6.4.1 ಎಲ್ಲಾ ದೀಪಗಳನ್ನು ಕಟ್ ಆಫ್ ದೀಪಗಳಾಗಿ ವಿನ್ಯಾಸಪಡಿಸಿರಬೇಕು. ಕಟ್ ಆಫ್ ದೀಪಗಳೆಂದರೆ 75 ಡಿಗ್ರಿ ಅಥವಾ ಅದಕ್ಕಿಂತ ಕಡಿಮೆ ಕಟ್ ಆಫ್ ಕೋನವಿರುವ ದೀಪಗಳು. ಕಟ್ ಆಫ್ ದೀಪಗಳು ಈ ಕೆಳಗಿನ ಮಾನಕಗಳಿಗೆ ಒಳಪಟ್ಟಿರುತ್ತವೆ:.

6.4.2 ಮುಕ್ತವಾಗಿ ನಿಂತಿರಲಿ ಅಥವಾ ಕಟ್ಟಡಕ್ಕೆ ಜೋಡಿಸಲ್ಪಟ್ಟಿರಲಿ, ಕಟ್ ಆಫ್ ದೀಪದ ಗರಿಷ್ಠ ಎತ್ತರ 7.5 ಮೀಟರ್ ಇರತಕ್ಕದ್ದು. 7.5 ಮೀಟರ್‌ಗಿಂತ ಎತ್ತರವಿರುವ ಯಾವುದೇ ದೀಪಕ್ಕೆ ವಿಶೇಷ ಅನುಮೋದನೆ ಪಡೆದುಕೊಳ್ಳುವ ಅವಶ್ಯಕತೆಯಿದೆ..

6.4.3 ಅಂಟಿಕೊಂಡಿರುವ ಸ್ವತ್ತಿನ ಗೆರೆಯಿಂದ ಯಾವುದೇ ಸ್ಥಾನದಲ್ಲಿ ನಿಂತರೂ, ನೆಲಮಟ್ಟದಿಂದ ಮೇಲೆ ಮೂರುವರೆ ಅಡಿ ಅತ್ತರದಿಂದ ನೋಡುವವರಿಗೆ ದೀಪದ ಮೂಲವು ಕಾಣದ ಹಾಗೆ ಕಟ್ ಆಫ್ ದೀಪವನ್ನು ವಿನ್ಯಾಸಗೊಳಿಸಿರಬೇಕು.

6.4.4 ಎಲೆಕ್ಟ್ರಾನಿಕ್ ಸಂದೇಶ ಫಲಕಗಳ ಗರಿಷ್ಠ ಉಜ್ವಲತೆಯನ್ನು ಹಗಲಿನಲ್ಲಿ 5000 ಯೂನಿಟ್‌ಗಳಿಗೆ ಮತ್ತು ಸಂಜೆಯಿಂದ ಮುಂಜಾವಿನವರೆಗೆ 500 ಯೂನಿಟ್‌ಗಳಿಗೆ ಮಿತಗೊಳಿಸಲಾಗಿದೆ. ಫಲಕಕ್ಕೆ ಸ್ವಯಂಚಾಲಿತ ಡಿಮ್ಮರ್ ನಿಯಂತ್ರಣ ವ್ಯವಸ್ಥೆಯಿದ್ದು, ಸೂರ್ಯೋದಯಕ್ಕೆ ಮುನ್ನ ಒಂದೂವರೆ ಗಂಟೆ ಹಾಗೂ ಸೂರ್ಯಾಸ್ತಕ್ಕೆ ಮುನ್ನ ಒಂದೂವರೆ ಗಂಟೆ ಅವಧಿಯಲ್ಲಿ ಗರಿಷ್ಠ ಬೆಳಕಿನ ಮಿತಿಯಿಂದ ಕನಿಷ್ಠ ಬೆಳಕಿನ ಮಿತಿಗೆ ತಾನೇ ತಾನಾಗಿ ಬದಲಾಗುವಂತೆ ಇರಬೇಕು.

**6.5 ಬೆಳಕು ಚೆಲ್ಲುವ ಮಾನಕಗಳು**

6.5.1 ಆಂತರಿಕವಾಗಿ ಬೆಳಗುವ ಫಲಕಗಳ ಒಳಮುಖವು ಬೆಳಕನ್ನು ಪ್ರಸರಿಸುವ ಹಾಗೆ ಫಿಲ್ಟರ್ ರೀತಿ ಕೆಲಸ ಮಾಡಬೇಕು. ಫಲಕದ ಮುಖಭಾಗವು ಆಂತರಿಕ ಬೆಳಕಿನ ವ್ಯವಸ್ಥೆಯ ಎಲ್ಲಾ ಘಟಕಗಳನ್ನು ಆವರಿಸಿರಬೇಕು ಮತ್ತು ಯಾವುದೇ ಬಲ್ಬ್ ಅಥವಾ ದೀಪದ ಭಾಗಗಳು ಕಾಣುವಂತಿರಬಾರದು.

6.5.2 ಫಲಕದ ಬೆಳಕು ನೋಡುಗರ ಕಣ್ಣಿಗೆ ಕೋರೈಸುವುದನ್ನು ತಡೆಗಟ್ಟುವ ರೀತಿ, ಅಥವಾ ರಸ್ತೆಯ ಮೇಲೆ ಮತ್ತು ಅಕ್ಕಪಕ್ಕದ ಸ್ವತ್ತುಗಳ ಮೇಲೆ ನೇರವಾಗಿ ಪ್ರಸಾರವಾಗದ ರೀತಿ, ಗೂಸ್‌ನೆಕ್ ಪ್ರತಿಫಲನಕಾರಕ , ಬಾಹ್ಯ ಬೆಳಕಿನ ವ್ಯವಸ್ಥೆ ಮತ್ತು ಆಂತರಿಕ ಬೆಳಕಿನ ವ್ಯವಸ್ಥೆ ಸೇರಿದಂತೆ ಯಾವುದೇ ಫಲಕದ ಬೆಳಕಿನ ವ್ಯವಸ್ಥೆ ಯನ್ನು ವಿನ್ಯಾಸಪಡಿಸಿ, ಸ್ಥಾಪಿಸಿ ಸೂಕ್ತವಾಗಿ ಮುಚ್ಚಿರಬೇಕು.

6.5.3 ಯಾವುದೇ ಫಲಕದ ಬಾಹ್ಯ ಬೆಳಕಿನ ವ್ಯವಸ್ಥೆ , ಫಲಕದ ಮುಖಭಾಗದ ಮುದ್ರಿತ ಪ್ರದೇಶದ ಮೇಲೆ ಬೆಳಕು ಚೆಲ್ಲುವಂತಿರಬೇಕು.

6.5.4 ಯಾವುದೇ ಫಲಕದ ಬೆಳಕಿನ ವ್ಯವಸ್ಥೆಯನ್ನು , ಕಣ್ಣು ಕೋರೈಸುವಂತೆ ಮಾಡುವ ಪ್ರತಿಫಲನಾತ್ಮಕ ವಸ್ತುವಿನ ಜೊತೆ ಸೇರಿಸಬಾರದು , ಉದಾಹರಣೆಗೆ ಕನ್ನಡಿ, ಪಾಲಿಷ್ ಮಾಡಿದ ಲೋಹ, ಅಥವಾ ತುಂಬಾ ಹೊಳೆಯುವ ಟೈಲ್, .

6.5.5 ಫಲಕದ ಅಂತರ್ಗತ ಭಾಗವಾಗಿ ವಿನ್ಯಾಸಪಡಿಸಲಾದ ನಿಯಾನ್, ಎಲ್ ಇ ಡಿ ದೀಪ, ಅಥವಾ ತೆರೆದುಕೊಂಡ ಬಲ್ಬ್ ಮುಂತದವುಗಳನ್ನು ನಿವಾಸೇತರ ಜಾಗಗಳಲ್ಲಿ ಮಾತ್ರ ಬಳಸಲು ಅನುಮತಿಸಲಾಗಿದೆ. ಫ್ಲ್ಯಾಷ್ ಆಗುವ ನಿಯಾನ್, ಎಲ್ ಇ ಡಿ ಅಥವಾ ಇತರ ಬಲ್ಬ್‌ಗಳ ಬಳಕೆ ನಿಷೇಧಿಸಲಾಗಿದೆ. ಬಾಗಿಲುಗಳು ಹಾಗೂ ಕಿಟಕಿಗಳ ಸುತ್ತ ನಿಯಾನ್, ಎಲ್ ಇ ಡಿ ಅಥವಾ ಇತರ ಬಲ್ಬ್‌ಗಳ ಬಳಕೆ ನಿಷೇಧಿಸಲಾಗಿದೆ.

6.5.6 ವಾಣಿಜ್ಯ ಭೂಬಳಕೆಯಲ್ಲಿ, ಫಲಕಗಳನ್ನು ಬಾಹ್ಯವಾಗಿ ಬೆಳಗಿಸಬಹುದು. ಆಂತರಿಕವಾಗಿ ಬೆಳಗುವ ಫಲಕಗಳನ್ನು ಈ ಕೆಳಗಿನ ಬಗೆಗಳಿಗೆ ಸೀಮಿತಗೊಳಿಸಲಾಗಿದೆ : 1. ಹಿಮ್ಮುಖ ವಾಹಿನಿ. ಫಲಕದಲ್ಲಿ ಬಳಸಿದ ಅಕ್ಷರ/ಚಿತ್ರಗಳು ಅದನ್ನು ಮೌಂಟ್ ಮಾಡಲಾದ ಮುಖಭಾಗದ ಮೇಲೆ ನೆರಳು ಬೀಳುವಂತೆ ಬೆಳಕಿನ ವ್ಯವಸ್ಥೆ 2. ಸ್ಟೆನ್ಸಿಲ್ ಅಥವಾ ಚಾನಲ್ ಕಟ್. ಅಕ್ಷರ ಅಥವಾ ಲೋಗೋಗಳನ್ನು ಮಾತ್ರ ಬೆಳಗಿಸುವಂಥ ದೀಪ ವ್ಯವಸ್ಥೆ 3. ಹ್ಯಾಲೊ. ಅಕ್ಷರಾ ಅಥವಾ ಲೋಗೋದ ಸುತ್ತ ಮಾತ್ರ ಬೆಳಕು ಚೆಲ್ಲುವಂತಿರುವ ದೀಪ ವ್ಯವಸ್ಥೆ.

**6.6 ನಿಷೇಧಿಸಲಾದ ದೀಪ ವ್ಯವಸ್ಥೆಗಳು**

6.1.1. ಪಾರಂಪರಿಕ ಲಕ್ಷಣವಿರುವಂಥ

6.1.2.ಸ್ಟ್ರೋಬ್ ದೀಫಗಳು, ಚಲಿಸುವ ಅಥವಾ ನಿಶ್ಚಲ ದೀಪಗಳು, ಮತ್ತು ಫ್ಲಡ್ ಲೈಟ್‌ಗಳನ್ನು ನಿಷೇಧಿಸಲಾಗಿದೆ..

6.1.3. ಆನ್-ಆಫ್ ಆಗುವ ಫ್ಲಾ ್ಯಷಿಂಗ್ ಗ್ರಾಫಿಕ್‌ಗಳನ್ನು ನಿಷೇಧಿಸಲಾಗಿದೆ..

## *7. ನಿಷೇಧಿತ ಫಲಕಗಳು*

**7.1. ಹೊರಾಂಗಣ ಫಲಕ ಅಥವಾ ಸಾರ್ವಜನಿಕ ಸಂದೇಶ ಪ್ರಸರಣಕ್ಕೆ ಅನುಮತಿಸುವಲ್ಲಿ ಈ ಕೆಳಗಿನ ನಿಷೇಢಗಳು ಅನ್ವಯವಾಗುತ್ತವೆ :**

7.1.1.ಟೆಲಿಕಮ್ಯೂನಿಕೇಷನ್ ಟವರ್‌ಗಳ ಮೇಲೆ ಫಲಕಗಳು

7.1.2. ಸಾರ್ವಜನಿಕ ಓಡಾಟಕ್ಕೆ ವಿರುದ್ಧವಾದ ಎಲ್ಲಾ ಬಗೆಯ ಹೋರ್ಡಿಂಗ್‌ಗಳು

7.1.3. ಇಳಿಜಾರಿನ ಮೇಲ್ಮೈಗಳ ಮೇಲೆ , ರಸ್ತೆಯಿಂದಾಚೆ ಮುಂಚಾಚಿಕೊಂಡ ಗೋಡೆಯ ಮೇಲಿನ ಫಲಕಗಳು

7.1.4. ಬಲೂನ್ ಹಾಗೂ ಗಾಳಿ ತುಂಬಿದ ಫಲಕಗಳು

7.1.5.ವರ್ಜಿಸಲಾದ ಫಲಕಗಳು ಹಾಗೂ ಫಲಕ ರಚನೆಗಳು.

7.1.6. ಅನುಮತಿತ ಎಲೆಕ್ಟ್ರಾನಿಕ್ ಫಲಕಗಳನ್ನು ಹೊರತುಪಡಿಸಿ, ಫ್ಲಾ ್ಯಷಿಂಗ್ ಅಥವಾ ಆನಿಮೇಟೆಡ್ ಫಲಕಗಳು.

7.1.7.ಕಾನೂನುಬಾಹಿರವಾಗಿ ಹಾಕಲಾದ ಫಲಕಗಳು ಮತ್ತು ಬಿತ್ತಿಪತ್ರಗಳು

7.1.8. ಗಾಳಿ ಅಥವಾ ಇತರ ನೈಸರ್ಗಿಕ ಮೂಲಗಳಿಂದ ಚಲಿಸುವಂತೆ ವಿನ್ಯಾಸಪಡಿಸಲಾದ ಫಲಕಗಳು ಒಳಗೊಂಡಂತೆ ಚಲಿಸುವ ಫಲಕಗಳು. ಗಡಿಯಾರಗಳನ್ನು ಈ ನಿಷೇಧದಿಂದ ರಿಯಾಯಿತಿ ನೀಡಲಾಗಿದೆ. ಆದರೆ ಇವು ಪರಿಗಣಿತ ಪ್ರಾಯೋಜಿತ ಸೌಕರ್ಯಗಳಲ್ಲ. .

7.1.9. ದೀಪದ ಕಂಬಗಳಿಗೆ ಅಥವಾ ದಿಕ್ಸೂಚಿ ಕಂಬಗಳು ಅಥವಾ ವಾಹನ ಸಂಚಾರ ಸೂಚನೆ ಕಂಬಗಳಿಗೆ ಜೋಡಿಸಲಾದ ಫಲಕಗಳು

7.1.10. ಆವರಣಾದಾಚೆ ಫಲಕಗಳು; ಶಾಶ್ವತ ಫಲಕಗಳು( ಇವುಇಗಳನ್ನು ಹೋರ್ಡಿಂಗ್ ಎಂದೂ ಕರೆಯಲಾಗುತ್ತದೆ) ಮತ್ತು ತಾತ್ಕಾಲಿಕ ಆವರಣಾದಾಚೆಗಿನ ಫಲಕಗಳು. ಈ ನಿಷೇಧದಲ್ಲಿ, ಸಾರ್ವಜನಿಕ ಸಾಗಾಟ ಫಲಕಗಳು, ಬೈಕ್ ವಿನಿಮಯ ನಿಲ್ದಾಣಗಳು, ಅಥವಾ ಕಾರ್ ವಿನಿಮಯ ಘಟಕಗಳು, ಒಳಗೊಂಡಿಲ್ಲ. ಈ ನಿಷೇಧದಲ್ಲಿ ವಾಣಿಜ್ಯೇತರ ಸಂದೇಶ ಪ್ರಸರಣ ಫಲಗಳೂ ಸೇರಿಲ್ಲ.ಎಂಟ್ಟೆ

7.1.11. ಸಾಗಿಸಬಲ್ಲ ಫಲಕಗಳು: ಚಕ್ರವಿರುವ ಸಾಧನದ ಮೇಲೆ ಜೋಡಿಸಲಾದ ಫಲಕಗಳು ಮತ್ತು ನಿಶ್ಚಲ ಸಾಧನದ ಮೇಲೆ ಅಳವಡಿಸಲಾದ ಫಲಕಗಳು ಸೇರಿವೆ. ಇವುಗಳನ್ನು ಬೇರೆಡೆಗೆ ಚಲಿಸಬಹುದಾಗಿದ್ದು, ಯಾವುದೇ ನಿವೇಶನದಲ್ಲಿ ಶಾಶ್ವತವಾಗಿ ಸ್ಥಾಪಿಸುವ ಹಾಗಿಲ್ಲ. .

**7.2. ವಾಹನ ಸಂಚಾರ ಅಥವಾ ನಿರ್ವಹಣೆಗೆ ಅಡಚಣೆಯುಂಟು ಮಾಡುವ ಯಾವುದೇ ಫಲಕವನ್ನು ನಿಷೇಧಿಸಲಾಗಿದೆ**

7.2.1. ಅಡ್ಡಬರುವ, ದೃಷ್ಟಿಗೆ ಅಡಚಣೆ ಉಂಟುಮಾಡುವ ಅಥವಾ ಫಲಕದ ಸ್ಥಾನ, ಆಕಾರ ಅಥವಾ ಬಣ್ಣದಿಂದಾಗಿ , ಅದನ್ನು ಅಧಿಕೃತ ಸೂಚನೆ, ಚಿಹ್ನೆ ಅಥವಾ ಟ್ರಾಫಿಕ್ ಸಿಗ್ನಲ್‌ನಂತೆ ಹೋಲುವ ಕೆಂಪು, ಹಸಿರು ಅಥವಾ ಹಳದಿ ಬಣ್ಣದಂತೆ ಕಾಣುವ ಸಾಧನವೆಂದು ತಪ್ಪಾಗಿ ಭಾವಿಸಬಹುದಾದ ಫಲಕಗಳು .

7.2.2. ವಾಹನ ಚಾಲಕರನ್ನು ಗೊಂದಲಕ್ಕೀಡು ಮಾಡುವ ಅಥವಾ ವಾಹನ ಚಾಲಕರನ್ನು ತಪ್ಪು ದಾರಿಗೆ ಸೆಳೆಯುವಂಥ ಖಖಿಔಕ, ಐಔಔಏ, ಆಇಖಿಔಗಖ, ಆಂಓಉಇಖ, ಅಗಖಿಖಔಓ, ಫಂಖಓಖಓಉ ಅಥವಾ ಇನ್ನಾವುದೇ ಪದ , ಪದಗುಚ್ಛ ಅಥವಾ ಚಿಹ್ನೆ ಅಥವಾ ಅಕ್ಷರಗಳನ್ನು ಬಳಸುವುದು.

**7.3 .ಪ್ರದರ್ಶನ ನಿಷೇಧಗಳು**

7.3.1. ಕಟ್ಟಡದ ಕೋಡ್, ಅಗ್ನಿ ಸಂಕೇತ ಅಥವಾ ಅನ್ವಯವಾಗುವ ಇತರ ಶಾಸನಗಳನ್ನು ಉಲ್ಲಂಘನೆ ಮಾಡುವಂಥ ಸ್ಥಳದಲ್ಲಿ ಯಾವುದೇ ಫಲಕವನ್ನು ಸ್ಥಾಪಿಸುವ ಹಾಗಿಲ್ಲ.

7.3.2. ಗಮನಾರ್ಹವಾದ ವಾಸ್ತುಶಿಲ್ಪ ಲಕ್ಷಣಗಳಿಗೆ ಶಾಶ್ವತ ಹಾನಿಯುಂಟು ಮಾಡುವ ಅಥವಾ ಅಡಚಣೆಯುಂಟು ಮಾಡುವ ಫಲಕಗಳನ್ನು ಸ್ಥಾಪಿಸಬಾರದು..

7.3.3. ಯಾವುದೇ ಸ್ವತ್ತಿನ ಮಾಲಿಕರ ಅನುಮತಿಯಿಲ್ಲದೆ, ಆ ಸ್ವತ್ತಿನಲ್ಲಿ ಯಾವುದೇ ಫಲಕವನ್ನು ಸ್ಥಾಪಿಸಬಾರದು..

7.3.4. ಸರ್ಕಾರಿ ಸಂಸ್ಥೆಗಳಿಂದ ಸ್ಥಾಪಿಸಲ್ಪಟ್ಟ ಫಲಕಗಳನ್ನು ಹೊರತುಪಡಿಸಿ ಅಥವಾ ಅಥವಾ ಈ ಖಂಡ ಅಥವಾ ಪ್ರಾಧಿಕಾರದ ಹಕ್ಕಿರುವ ಸ್ಥಳದಲ್ಲಿ ಸಾರ್ವಜನಿಕ ಸ್ವತ್ತಿನಲ್ಲಿ ಫಲಕವನ್ನು ಸ್ಥಾಪಿಸಬಾರದು. .

7.3.5. ಯಾವುದೇ ಪ್ರವೇಶ ಅಥವಾ ನಿರ್ಗಮನ, ಬೆಂಕಿಯಿಂದ ತಪ್ಪಿಸಿಕೊಳ್ಳುವ ಹಾದಿ/ಮಾರ್ಗ ಅಥವಾ ಲಂಬ ಪೈಪ್‌ಗಳಿಗೆ ಅಡಚಣೆಯುಂಟು ಮಾಡುವ ರೀತಿ ಫಲಕಗಳನ್ನು ಸ್ಥಾಪಿಸುವ ಹಾಗಿಲ್ಲ..

## *8. ಜಾರಿಗೊಳಿಸುವುದು*

***8.1.*** ಸಾರ್ವಜನಿಕ ಸ್ವತ್ತಿನಲ್ಲಿ ಅಥವಾ ಸಾರ್ವಜನಿಕರಿಗೆ ಪ್ರವೇಶಾವಕಾಶದ ಹಕ್ಕಿರುವ ಅಥವಾ ಸಾರ್ವಜನಿಕ ಅನುಕೂಲಕ್ಕಿರುವ ಸ್ಥಳದಲ್ಲಿ ಅಧಿಕೃತ ಅನುಮತಿ ಇಲ್ಲದೆ ಅಥವ ಅಧಿಕೃತ

ಪ್ರದರ್ಶನ ಅನುಮತಿ ಇಲ್ಲದ ಯಾವುದೇ ಫಲಕವನ್ನು ಪೂರ್ವಸೂಚನೆ ಇಲ್ಲದೆ ತೆಗೆದುಹಾಕಬಹುದು..

*8.2.* ***ಅವಶ್ಯ ಪರವಾನಗಿ ಇಲ್ಲದೆ ಅಥವಾ ಈ ಖಂಡದ ಅಥವಾ ಮುಂಚಿನ ಕಾನೂನು/ನಿಯಮಗಳ ಉಲ್ಲಂಘನೆಯಾಗಿ*** ಫಲಕವನ್ನು ಕಾನೂನುಬಾಹಿರವಾಗಿ ಸ್ಥಾಪಿಸಲಾಗಿದ್ದರೆ,ಅಂತಹ ಫಲಕವನ್ನು ತೆಗೆಯುವಂತೆ ಅಥವಾ ಉಲ್ಲಂಘನೆಯನ್ನು ಸೂಚನೆಪತ್ರ ನೀಡಿದ 30 ದಿನಗಳೊಳಗೆ ಸರಿಪಡಿಸಿಕೊಳ್ಳದಿದ್ದರೆ, ಪ್ರಾಧಿಕಾರವು ಸ್ವತ್ತಿನ ಮಾಲಿಕರಿಗೆ ಸೂಚನೆಪತ್ರ ನೀಡಬಹುದು.

*8.3.* ಫಲಕವನ್ನು ತೆಗೆಯದಿದ್ದರೆ ಅಥವಾ ಉಲ್ಲಂಘನೆಯನ್ನು ಸೂಚನೆಪತ್ರ ನೀಡಿದ 30 ದಿನಗಳೊಳಗೆ ಸರಿಪಡಿಸಿಕೊಳ್ಳದಿದ್ದರೆ,ಅಂತಹ ಕಾನೂನುಬಾಹಿರ ಫಲಕಗಳನ್ನು ಮಾಲಿಕರ ಖರ್ಚಿನ ಮೇರೆಗೆ ಪಾಲಿಕೆಯು ತೆಗೆದುಹಾಕಬಹುದು..

## *9. ಪರವಾನಗಿ ಅವಶ್ಯಕತೆಗಳಿಗೆ ವಿನಾಯಿತಿಗಳು*

ಈ ಕೆಳಗಿನ ಫಲಕಗಳಿಗೆ ಹಾಗೂ ಚಟುವಟಿಕೆಗಳಿಗೆ ಪರವಾನಗಿ ಅವಶ್ಯವಿರುವುದಿಲ್ಲ, ಆದರೂ ಈ ನೀತಿಯಡಿಯ ಅನ್ವಯವಾಗುವ ಅವಶ್ಯಕತೆಗಳನ್ನು ಅನುಸರಿಸಬೇಕು. ಈ ನೀತಿಯಡಿ ನಿರ್ದಿಷ್ಟವಾಗಿ ಅನುಮತಿ ಇರದ ಹೊರತಾಗಿ, ಯಾವುದೇ ಫಲಕವನ್ನು ಬೆಳಕಿನಿಂದ ಬೆಳಗಿಸಬಾರದು. ಅಧಿಕೃತ ಅನುಮತಿ ಇಲ್ಲದೆ ಯಾವುದೇ ಫಲಕವು ಸಾರ್ವಜನಿಕ ಸಂಚಾರ ಮಾರ್ಗದ ಒತ್ತುವರಿ ಮಾಡುವ ಹಾಗಿಲ್ಲ. .

### *9.1.* ಮಾರ್ಪಾಡು ಮತ್ತು ನಿರ್ವಹಣೆ ಕಾರ್ಯಾಚರಣೆಗಳು

9.1.1. ಪ್ರದರ್ಶಿಸಲಾಗಿರುವ ಬದಲಾಯಿಸಬಲ್ಲ ಸಂದೇಶ ಫಲಕ ಅಥವಾ ಎಲೆಕ್ಟ್ರಾನಿಕ್ ಸಂದೇಶ ಫಲಕದಲ್ಲಿನ ಸಂದೇಶ ಬದಲಾಯಿಸುವುದು.

9.1.2. ಕಾನೂನುಸಮ್ಮತವಾಗಿ ಚಾಲ್ತಿಯಲ್ಲಿ ಪ್ರದರ್ಶಿತವಾಗುತ್ತಿರುವ ಫಲಕದ ರಚನೆಯ ಮುಖಭಾಗ ಬದಲಾಯಿಸುವುದು , ಆದರೆ ಹಾಗೆ ಮಾಡುವಾಗ, ಫಲಕದ ರಚನೆಗೆ ಮತ್ತು ಫಲಕ ಪ್ರದರ್ಶನ ವಿಸ್ತೀರ್ಣ , ಎತ್ತರ, ಅಥವಾ ಫಲಕದ ಯಾವುದೇ ಆಯಾಮಗಳನ್ನು ಬದಲಾಯಿಸುವ ಹಾಗಿಲ್ಲ..

9.1.3. ಬೆಳಕಿನ ವ್ಯವಸ್ಥೆಗೆ ಬದಲಾವಣೆ, ಉದಾಹರಣೆಗೆ, ಫ್ಲೂರೊಸೆಂಟ್ ದೀಪಗಳಿಂದ ಎಲ್ ಇ ಡಿ ದೀಪಗಳ ಬಳಕೆ.

### *9.2.* ನಿರ್ಮಾಣ ಸೂಚನೆ ಫಲಕಗಳು

9.2.1. ಕಾಮಗಾರಿ ಚಾಲ್ತಿಯಲ್ಲಿರುವ ನಿರ್ಮಾಣ ಯೋಜನೆಯ ಆವರಣದೊಳಗೆ ಪ್ರತಿ ಬೀದಿಯ ಮುಖಭಾಗಕ್ಕೆ ಒಂದು ನಿರ್ಮಾಣ ಯೋಜನೆಗೆ ಗರಿಷ್ಠ ಒಂದು ಫಲಕ ಅನುಮತಿಸಲಾಗಿದೆ.

9.2.2. ಕಟ್ಟಡ ನಿರ್ಮಾಣಕ್ಕೆ ಅನುಮತಿ ಲಭ್ಯವಾದ ನಂತರವೇ ನಿರ್ಮಾಣ ಸೂಚನೆ ಫಲಕಗಳನ್ನು ಪ್ರದರ್ಶಿಸಬಹುದು. ಮತ್ತು ನಿರ್ಮಾಣ ಕಾರ್ಯ ಮುಗಿದ ನಂತರ 60 ದಿನಗಳೊಳಗೆ ಅಂತಹ ಫಲಕಗಳನ್ನು ತೆಗೆದುಬಿಡಬೇಕು.

9.2.3. ನಿರ್ಮಾಣ ಸೂಚನೆ ಫಲಕಗಳಿಗೆ 10 ಚದುರ ಮೀಟರ್ ವಿಸ್ತೀರ್ಣ ಮತ್ತು 2 ಮೀಟರ್ ಎತ್ತರದಷ್ಟು ಪರಿಮಿತಿಯಿದ್ದು, ನಿವಾಸದ ಪ್ರದೇಶದಲ್ಲಿ 4 ಚದುರ ಮೀಟರ್ ವಿಸ್ತೀರ್ಣಕ್ಕೆ ಮಾತ್ರ ಅನುಮತಿಯಿದೆ. ಮುಕ್ತವಾಗಿ(ಸ್ವತಂತ್ರವಾಗಿ) ನಿಲ್ಲಿಸಲ್ಪಟ್ಟ ನಿರ್ಮಾಣ ಸೂಚನೆ ಫಲಕಗಳು ಇತರ ಯಾವುದೇ ಸ್ವತ್ತಿನ ಪರಿಧಿಯಿಂದ 3 ಮೀಟರ್ ಸೆಟ್ ಬ್ಯಾಕ್ ಇರಬೇಕು.

9.2.4. ಮುಂಭಾಗವನ್ನು ಮುಚ್ಚುವಂಥ ನಿರ್ಮಾಣ ನಿವೇಶದ ಮೇಲಿರುವ ಜಾಹಿರಾತುಗಳಿಗೆ ನಿವೇಶನದೊಳಗೆ ಒಂದು ಜಾಹಿರಾತಿಗೆ ಮಾತ್ರ ಅನುಮತಿ ಇರುತ್ತದೆ. ಉದಾಹರಣೆಗೆ ಡೆವಲಪರ್‌ನ ಹೆಸರು, ಕಟ್ಟಡ/ಯೋಜನೆಯ ಹೆಸರು, ಪ್ರಾಥಮಿಕ ವಾಣಿಜ್ಯಾತ್ಮಕ ಅನುಭವದಾರ , ಪ್ರಾಥಮಿಕ ಬಳಕೆಯ ಗುರುತು.

## *9.3.* ಮಾರ್ಗದರ್ಶ ಸೂಚನಾ ಫಲಕಗಳು

9.3.1. ಪ್ರತಿ ಸಾರ್ವಜನಿಕ ಪ್ರವೇಶ ದ್ವಾರಕ್ಕೆ ಒಂದು ಕಟ್ಟಡಕ್ಕೆ ಒಂದು ಮಾರ್ಗದರ್ಶಕ ಸೂಚನ ಫಲಕ ಅನುಮತಿಸಲಾಗಿದೆ.

9.3.2. ಕಟ್ಟಡದ ಮಾರ್ಗದರ್ಶಕ ಸೂಚನಾ ಫಲಕವನ್ನು ಗೋಡೆಗೆ ಅಳವಡಿಸಲಾಗಿರಬೇಕು ಮತ್ತು ಆರು ಚದುರ ಅಡಿ ವಿಸ್ತೀರ್ಣಕ್ಕೆ ಮಿತಗೊಳಿಸಲಾಗಿದೆ.

9.3.3. ಕಟ್ಟಡದ ಮಾರ್ಗದರ್ಶಕ ಸೂಚನಾ ಫಲಕಕ್ಕೆ ಬಾಹ್ಯದಿಂದ ಬೆಳಕಿನ ವ್ಯವಸ್ಥೆ ಕಲ್ಪಿಸಲು ಅನುಮತಿಯಿದೆ.

## *9.4.* ಸರ್ಕಾರಿ ಸೂಚನಾ ಫಲಕಗಳು

9.4.1.ವಾಹನ ಸಂಚಾರ ಇಲಾಖೆಯ ಸೂಚನಾ ಫಲಕಗಳು , ಸಿಗ್ನಲ್‌ಗಳು, ಕಾನೂನ್ನಾತ್ಮಕ ಪ್ರಕಟಣೆಗಳು, ರೈಲುರಸ್ತೆ ದಾಟುವ ಸೂಚನೆಗಳು, ಅಥವಾ ವಾಹನ ಸಂಚಾರ ನಿಯಂತ್ರಿಸಲು ನಿರ್ದೇಶನಾತ್ಮಕ ಪ್ರದರ್ಶಿಸಲ್ಪಡುವ ಫಲಕಗಳು ಅಥವಾ ವಾಹನ ಚಾಲಕರಿಗೆ, ಪಾದಚಾರಿಗಳಿಗೆ ಮಾಹಿತಿ ನೀಡಲು ಹಾಕುವಂಥ ಫಲಕಗಳು ಒಳಗೊಂಡಂತೆ ಯಾವುದೇ ಸರ್ಕಾರದ ಇಲಾಖೆ/ವಿಭಾಗ ಹಾಕುವ ಅಥವಾ ಸರ್ಕಾರದ ಇಲಾಖೆ/ವಿಭಾಗದ ಅಧಿಕೃತ ಅನುಮತಿ ಇರುವ ಫಲಕಗಳನ್ನು ಯಾವುದೇ ಗಾತ್ರದಲ್ಲಿ, ಎಷ್ಟಾದರೂ ಸಂಖ್ಯೆಗಳಲ್ಲಿ ಮತ್ತು ಯಾವುದೇ ರೀತಿಯ ಭೂಬಳಕೆ ವಲಯದಲ್ಲಿ ಪ್ರದರ್ಶಿಸಲು ಅನುಮತಿಸಲಾಗಿದೆ. ಅಂತಹ ಫಲಕಗಳನ್ನು ಇಲಾಖೆ/ವಿಭಾಗ ಇಚ್ಛಿಸಿದ ರೀತಿ ದೀಪ ವ್ಯವಸ್ಥೆಗೆ ಅನುಮತಿಯಿದೆ.

9.4.2.ಶಾಲೆಗಳು ಹಾಗೂ ಆಸ್ಪತ್ರೆಗಳಂಥ ಸಾರ್ವಜನಿಕ ಸಂಸ್ಥೆಗಳ ಸೂಚನಾ ಫಲಕಗಳು

## 9.5.ಉತ್ಸವ/ಹಬ್ಬಗಳ ಸಂದರ್ಭದಲ್ಲಿ ಅಲಂಕಾರಿಸುವುದು

9.5.1. ಎಲ್ಲಾ ವಲಯಗಳಲ್ಲೂ ಹಬ್ಬ/ಉತ್ಸವಗಳ ಸಂದರ್ಭಗಳಲ್ಲಿ ತಾತ್ಕಾಲಿಕ ಅಲಂಕಾರಕ್ಕೆ ಅನುಮತಿಯಿದೆ. ಅಂತಹ ಉತ್ಸವ ಅಲಂಕಾರಗಳಿಗೆ ಆಂತರಿಕವಾಗಿ ಅಥವಾ ಬಾಹ್ಯವಾಗಿ ಬೆಳಕಿನ ವ್ಯವಸ್ಥೆ ಮಾಡಬಹುದು, ಆದರೆ ದೀಪ ವ್ಯವಸ್ಥೆಯ ಮಾನಕಗಳಿಗೆ ಬದ್ಧವಾಗಿರಬೇಕು.

## 9.6.ಸ್ಮಾರಕ ಬಿತ್ತಿಗಳು

9.6.1. ಐತಿಹಾಸಿಕ ವ್ಯಕ್ತಿ, ಘಟನೆ, ಕಾರ್ಯಕ್ರಮ, ಕಟ್ಟಡ ಅಥವಾ ನಿವೇಶನದ ಸ್ಮಾರಕವಾಗಿ ನಿರ್ಮಿಸುವ ಬಿತ್ತಿಗಳಿಗೆ ಯಾವುದೇ ವಲಯದಲ್ಲೂ ಪ್ರದರ್ಶಿಸುವ ಅನುಮತಿಯಿದೆ..

9.6.2. ಸ್ಮಾರಕ ಬಿತ್ತಿಯು ಸ್ವತಂತ್ರವಾಗಿ ನಿಲ್ಲುವಂಥದ್ದಿರಬಹುದು ಅಥವಾ ಗೋಡೆಗೆ ಅಳವಡಿಸಿರಬಹುದು ಮತ್ತು 60 ಚದುರ ಅಡಿ ವಿಸ್ತೀರ್ಣಕ್ಕೆ ಮಿತಗೊಳಿಸಲಾಗಿದೆ. ಸ್ವತಂತ್ರವಾಗಿ ನಿಲ್ಲುವ ಸ್ಮಾರಕ ಬಿಟ್ಟಿಗಳ ಎತ್ತರ 1.2 ಮೀಟರ್‌ಗಿಂತ ಹೆಚ್ಚಿರಬಾರದು..

9.6.3.ಸ್ಮಾರಕ ಬಿತ್ತಿಗೆ ಹೊರಗಿನಿಂದ ಬೆಳಕಿಬ ವ್ಯವಸ್ಥೆಗೆ ಅನುಮತಿಯಿದೆ..

## *9.7.* ನಾಮ ಫಲಕಗಳು(ನಿವಾಸದ ಕಟ್ಟಡಗಳಿಗೆ)

9.7.1. ನಾಮಫಲಕಗಳನ್ನು ಗೋಡೆಗೆ ಅಳವಡಿಸಿರಬೇಕು ಮತ್ತು ಅದರ ವಿಸ್ತೀರ್ಣ 20 ಚದುರ ಸೆಂ.ಮೀ. ಗಿಂತ ಅಧಿಕವಾಗಿರಬಾರದು.

9.7.2. ನಿವಾಸದ ಬಳಕೆಗೆ ಉಪಯೋಗಿಸುವ ಪ್ರತಿ ನಿವಾಸ ಸ್ಥಳಕ್ಕೆ ಕಟ್ಟಡ ಅಥವ ಅನುಭವದಾರನ ಹೆಸರು ಮತ್ತು ವಿಳಾಸ ಸೇರಿದಂತೆ ಒಂದು ನಾಮಫಲಕವನ್ನು ಮಾತ್ರ ಪ್ರದರ್ಶಿಸಬಹುದು.

## 9.8.ಪಾರ್ಕಿಂಗ್ ಪ್ರದೇಶದಲ್ಲಿ ಫಲಕಗಳು

### 9.8.1. ನಿರ್ದೇಶನಾತ್ಮಕವಾದದ್ದು

9.8.1.1. ಸ್ವತಂತ್ರವಾಗಿ ನಿಂತ ಪಾರ್ಕಿಂಗ್ ಪ್ರದೇಶದ ನಿರ್ದೇಶನಾತ್ಮಕ/ಮಾರ್ಗದರ್ಶನ ನೀಡುವ ಫಲಕದ ಎತ್ತರ 1.2 ಮೀಟರ್ ಇರಬೇಕು ಮತ್ತು ಯಾವುದೇ ಸ್ವತ್ತಿನ ಸರಹದ್ದಿನಿಂದ ಮೂರು ಮೀಟರ್ ದೂರದಲ್ಲಿರಬೇಕು.

9.8.1.2. ಪಾರ್ಕಿಂಗ್ ಪ್ರದೇಶದ ನಿರ್ದೇಶನಾತ್ಮಕ ಸೂಚನಾ ಫಲಕಗಳನ್ನು ಪ್ರತಿ ಪ್ರವೇಶದ್ವಾರ /ನಿರ್ಗಮನ ದ್ವಾರ, ಡ್ರೈವ್ ವೇ ಇಂಟರ್ ಸೆಕ್ಷನ್, ಡ್ರೈವ್ ತ್ರೂ ಲೇನ್, ಅಥವಾ ಯಾವುದೇ ಪಾರ್ಕಿಂಗ್ ಪ್ರದೇಶದ ಸಂಚಾರ ಪಾಯಿಂಟ್‌ಗಳಿಗೆ ಅನುಮತಿಸಲಾಗಿದೆ.

9.8.1.3. ಪಾರ್ಕಿಂಗ್ ಪ್ರದೇಶದ ನಿರ್ದೇಶನಾತ್ಮಕ ಸೂಚನಾ ಫಲಕಗಳನ್ನು 40 ಚದುರ ಸೆಂ.ಮೀ. ವಿಸ್ತೀರ್ಣಕ್ಕೆ ಮಿತಗೊಳಿಸಲಾಗಿದೆ..

9.8.1.4. ಪಾರ್ಕಿಂಗ್ ಪ್ರದೇಶದ ನಿರ್ದೇಶನಾತ್ಮಕ ಸೂಚನಾ ಫಲಕಗಳನ್ನು ಆಂತರಿಕವಾಗಿಅಥವಾ ಹೊರಗಿನಿಂದ ಬೆಳಕಿನ ವ್ಯವಸ್ಥೆ ಮಾಡಬಹುದು..

### 9.8.2. ಮಾಹಿತಿಪೂರ್ಣ

9.8.2.1.ಓಂ ಕಚಿಡಿಇಟಿರಿ" ಅಥವಾ "ಗಿಟಚಿಣಾಖುಂಡುದಜಜ ಗಜಥಿ ಖುಚಿಟಟ ಃಜ ಖಿಂತಿಜಜ," ಮುಂತಾದ ಪಾರ್ಕಿಂಗ್ ಪ್ರದೇಶದ ಕಾರ್ಯನಿರ್ವಹಿಸುವ ವಿಧಾನದ ಬಗ್ಗೆ ಮಾಹಿತಿ ಒದಗಿಸುವ ಪಾರ್ಕಿಂಗ್ ಪ್ರದೇಶದ ನಿರ್ದೇಶನಾತ್ಮಕ ಸೂಚನಾ ಫಲಕಗಳನ್ನು ಅನುಮತಿಸಲಾಗಿದೆ.

9.8.2.2. ಸ್ವತಂತ್ರವಾಗಿ ನಿಲ್ಲುವ ಫಲಕಗಳ ಎತ್ತರ ಎರಡು ಮೀಟರ್ ಇರಬಹುದು ಮತ್ತು ಸ್ವತ್ತಿನ ಸರಹದ್ದಿನಿಂದ 1 ಮೀಟರ್ ದೂರದಲ್ಲಿರಬೇಕು..

9.8.2.3. ಪಾರ್ಕಿಂಗ್ ಪ್ರದೇಶದ ಮಾಹಿತಿ ಕುರಿತ ಫಲಕಗಳ ವಿಸ್ತೀರ್ಣ ಮಿತಿ ಒಂದು ಚರ್ದುರ ಮೀಟರ್..

### *9.9.* ಸ್ವತ್ತನ್ನು ಗುರುತಿಸುವ ಸೂಚನಾ ಫಲಕಗಳು

9.9.1. ಸ್ವತ್ತನ್ನು ಗುರುತಿಸುವ ಸೂಚನಾಫಲಕವು ಗೋಡೆಗೆ ಅಳವಡಿಸಿರಬೇಕು ಮತ್ತು ಅದರ ವಿಸ್ತೀರ್ಣ 2 ಚ.ಮೀ. ಗಿಂತ ಹೆಚ್ಚಿರಬಾರದು..

9.9.2. ಸ್ವತ್ತನ್ನು ನಿರ್ವಹಿಸುವ ಸಂಸ್ಥೆಯನ್ನು ಗುರುತಿಸುವಂತೆ ಒಂದು ಕಟ್ಟಡಕ್ಕೆ ಗರಿಷ್ಠ ಒಂದು ಸೂಚನಾಫಲಕವನ್ನು ಅನುಮತಿಸಲಾಗಿದೆ.

### *9.10.* ರಿಯಲ್ ಎಸ್ಟೇಟ್ ಸೂಚನಾ ಫಲಕಗಳು

9.10.1. ರಿಯಲ್ ಎಸ್ಟೇಟ್ ಸೂಚನಾ ಫಲಕಗಳು ಸ್ವತಂತ್ರವಾಗಿರಬಹುದು ಅಥವಾ ಗೋಡೆಗೆ ಅಳವಡಿಸಿರಬಹುದು. ಸ್ವತಂತ್ರವಾಗಿ ನಿಂತಿದ್ದರೆ, ಅದರ ಎತ್ತರ ಗರಿಷ್ಟ 2 ಮೀಟರ್

9.10.2. ಎಲ್ಲಾ ರೀತಿಯ ಭೂಬಳಕೆಗಳಲ್ಲಿ ಪ್ರತಿ ಬೀದಿಯ ಮುಖಭಾಗಕ್ಕೆ ಗರಿಷ್ಟ ಒಂದು ರಿಯಲ್ ಎಸ್ಟೇಟ್ ಸೂಚನಾ ಫಲಕ ಅನುಮತಿಸಲಾಗಿದೆ.

9.10.3. ಇವಾಸದ ಭೂ ಬಳಕೆಗೆ ವಿಸ್ತೀರ್ಣ ಮಿತಿ 2 ಚ.ಮೀ. ವಾಣಿಜ್ಯ ಬಳಕೆಗೆ 4 ಚ.ಮೀ. ಮತ್ತು ಉದ್ಯಾನವನಗಲು, ಕೈಗಾರಿಕಾ , ಸಾರ್ವಜನಿಕ ಹಾಗೂ ಅರೆ ಸಾರ್ವಜನಿಕ ಭೂ ಬಳಕೆಗೆ 10 ಚ.ಮೀ. ಮಿತಿ ಇದೆ.

9.10.4. ವಹಿವಾಟು ಮುಗಿದ ನಂತರ 15 ದಿನಗಳೊಳಗೆ ಎಲ್ಲಾ ಫಲಕಗಳನ್ನು ತೆಗೆಯಬೇಕು.

### *9.11.* ಸ್ಕೋರ್ ಬೋರ್ಡ್‌,

9.11.1. ಆವುದೇ ಆಟದ/ಕ್ರೀಡೆಯ ಸ್ಕೋರ್ ರೆಕಾರ್ಡ್ ಮಾಡಿ ಪ್ರದರ್ಶಿಸುವ ಸ್ಕೋರ್ ಬೋರ್ಡ್ ಫಲಕವನ್ನು ಕ್ರೀಡಾಂಗಣಗಳ ಮತ್ತು ಕ್ರೀಡಾ ಪ್ರದೇಶಗಳ ಒಳಾಂಗಣದಲ್ಲಿರಿಸಬಹುದು ಮತ್ತು ಅದರಲ್ಲಿ ಆಯಾ ಕ್ರೀಡಾಂಗಣದ ಹೆಸರು ಅಥವಾ ತಂಡಗಳ ಹೆಸರು ಸೇರಿಸಬಹುದು ಮತ್ತು ಎಲ್ಲಾ ಮನೋರಂಜನಾತ್ಮಕ ಕ್ರೀಡಾಂಗಣಗಳಿಗೆ ಜಾಹಿರಾತು ಪ್ರದರ್ಶನಕ್ಕೆ ಅನುಮತಿ ಇದೆ. ಸ್ಕೋರ್ ಬೋರ್ಡ್‌ನ ಸ್ಕೋರ್ ಬರೆಯುವ ಭಾಗವು ಎಲೆಕ್ಟ್ರಾನಿಕ್ ಸಂದೇಶದ ಘಟಕ ಹೊಂದಿರಬಹುದು..

## *10. ಅರ್ಜಿ ಸಲ್ಲಿಕೆ*

### 10.1. ಅರ್ಜಿ

10.1.1.ಹೊರಾಂಗಣ ಸ್ವ ಜಾಹಿರಾತು/ಸಾರ್ವಜನಿಕ ಸಂದೇಶ ಅಥವಾ ಫಲಕ ಸ್ಥಾಪಿಸಲು ಅಥವ ಅಪ್ರದರ್ಶಿಸಲು ಸಾಲಿಸುವ ಅರ್ಜಿಯು:;

10.1.2.ಪ್ರತಿ ಫಲಕ ಅಥವಾ ಜಾಹಿರಾತು ಅಥವಾ ಸಾರ್ವಜನಿಕ ಸಂದೇಸಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು . ಅರ್ಜಿಯನ್ನು ಸಂಬಂಧಪಟ್ಟ ವಲಯದ ಕ್ಷೇತ್ರ ಅನುಮೋದನೆ ಅಧಿಕಾರಿಗೆ ಸಲ್ಲಿಸಬೇಕು..

10.1.3. ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಇ–ಮೈಲ್ ವಿಳಾಸ , ಮತ್ತು ವಿವರಗಳು ಹಾಗೂ ಆವರಣದ ಮಾಲಿಕರ ನಿರಪೇಕ್ಷಣಾ ಪತ್ರ ಮತ್ತು ವಿದ್ಯುತ್ ಸರಬರಾಜು ಇದ್ದಲ್ಲಿ, ಅದರ ವಿವರಗಳು, ಕಂಓ ಮತ್ತು ಉಖಖ ಫಲಕವು ಎಲ್ಲಿ ಪ್ರದರ್ಶಿತವಾಗುತ್ತದೆ ಎಂಬುದರ

ವಿವರಗಳೊಂದಿಗೆ ನಿಗದಿತ ನಮೂನೆಯಲ್ಲಿ (ನಮೂನೆ ನ> 1) ಅರ್ಜಿ ಸಲ್ಲಿಸಿ ;

10.1.4. ಫಲಕ/ಬೀದಿ ಗ್ರಾಫಿಕ್ ಯಾವ ದಿನಾಂಕ ಸ್ಥಾಪಿಸಬೇಕು/ಪ್ರದರ್ಶಿಸಬೇಕು ಸಲ್ಲಿಸಿ;

10.1.5. ವಲಯದಲ್ಲಿ ಭೂಬಳಕೆ ಮತ್ತು ವಿಶೇಷ ಲಕ್ಷಣಗಳ ವಿಸ್ತೀರ್ಣ ಮುಂತಾದ ವಿವರಗಳನ್ನು ಒದಗಿಸಿ.

10.1.6. ಫಲಕ/ಬೀದಿ ಗ್ರಾಫಿಕ್‌ನ ಮುದ್ರಕರು/ವಿನ್ಯಾಸಗಾರರು/ತಯಾರಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಇ–ಮೈಲ್ ವಿಳಾಸ ,ಉಖಖಿವಿವರಗಳನ್ನು ಒದಗಿಸಿ .

10.1.7. ವ್ಯಾಪಾರ ನಡೆಸಲು ಅರ್ಜಿ ಸಲ್ಲಿಸುವ ದಿನಾಂಕದ ಪ್ರಕಾರ, ಮಾನ್ಯತೆ ಇರುವ ಹಾಗೂ ಕಾನೂನುಸಮ್ಮತವಾದ ವ್ಯಾಪಾರ ಪರವಾನಗಿ ಮತ್ತು ಕಟ್ಟಡಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಯಾವುದೇ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿಲ್ಲ ಎಂದು ಅರ್ಜಿ ಸಲ್ಲಿಸಿ.

10.1.8.ನೀತಿಯಿಂದ ಯಾವುದೇ ವಿಪಥನ , ಇದ್ದಲ್ಲಿ, ಅದರ ಬಗ್ಗೆ ಅಧಿಕೃತ ಅಧಿಕಾರಿಗಳಿಂದ /ಪರಿಶೀಲನಾ ಸಮಿತಿಯಿಂದ ವಿವರಗಳು..

10.1.9. ಸದರಿ ಫಲಕ ಅಥವಾ ಜಾಹಿರಾತಿಗೆ ಅರ್ಜಿದಾರರು ಈ ಮುನ್ನ ಈ ನೀತಿಯಡೊಇ ಅರ್ಜಿ ಸಲ್ಲಿಸಿದ್ದರೆ , ಅದರ ವಿವರಗಳನ್ನು ಒದಗಿಸಿ .

10.1.10.ಜಾಹಿರಾತು ನೀತಿ ಮತ್ತು ಉಪಬಂಧಗಳಲ್ಲಿ ವಿವರಿಸಿರುವ ಷರತ್ತು ಹಾಗೂ ನಿಬಂಧನೆಗಳಿಗೆ ತಾನು ಬದ್ಧನಾ/ಳಾಗಿರುತ್ತೇ ನೆ ಎಂದು ಅರ್ಜಿದಾರರಿಂದ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆ ಮತ್ತು ಪ್ರದರ್ಶನ ಮುಂದುವರಿದ ಅವಧಿಯಲ್ಲಿ ತನ್ನಿಂದ ತಪ್ಪಾದರೆ, ಅದಕ್ಕೆ ಅನ್ವಯವಾಗುವ ದಂಡ ಹಾಗೂ ಶಿಕ್ಷೆ ಎದುರಿಸಲು ಸಿದ್ಧ ಎಂಬ ಮುಚ್ಚಳಿಕೆ ನೀಡಬೇಕು.

10.1.11.0 ಇವುಗಳನ್ನು ತೋರಿಸುವ ಸಂಕ್ಷಿಪ್ತ ಸ್ವರೂಪದ ಡ್ರಾಯಿಂಗ್ ;

10.1.11.1.ಆವರಣದಲ್ಲಿ ಪ್ರಸ್ತುತ ಪ್ರದರ್ಶಿಸಲಾದ ಎಲ್ಲಾ ಗ್ರಾಫಿಕ್/ಫಲಕಗಳ ಚಿತ್ರ

10.1.11.2. ಉದ್ದೇಶಿತ ಫಲಕದ ಸ್ಥಳ, ಎತ್ತರ ಮತ್ತು ಗತರ .

10.1.11.3. ಪ್ರದರ್ಶಿಸಲು ಉದ್ದೇಶಿಸಿರುವ ಫಲಕದಲ್ಲಿನ ಮಾಹಿತಿ.

10.1.11.4. ಉದ್ದೇಶಿತ ಬೀದಿ ಗ್ರಾಫಿಕ್ಸ್‌ನಿಂದ ಮುಚ್ಚಲ್ಪಡುವ ಫಲಕದ ವಿಸ್ತೀರ್ಣದ ಶೇಕಡಾವಾರು .

10.1.11.5. ನಿರ್ಮಾಣ ಅಥವಾ ಪ್ರದರ್ಶನಕ್ಕೆ , ಬೆಳಕಿನ ವ್ಯವಸ್ಥೆಗೆ , ಯಾಂತ್ರಿಕ ಚಲನವಲನಕ್ಕೆ ವಿನಿರ್ದೇಶನಗಳು ಇದ್ದಲ್ಲಿ, ಅವುಗಳನ್ನು ಒದಗಿಸಬೇಕು.

10.1.12.ಅಂತಹ ಅಪೂರ್ಣ ಅರ್ಜಿ ಅಥವಾ ಮೇಲೆ ತಿಳಿಸಿರುವ ಅವಶ್ಯ ಲಗತ್ತುಗಳಿಲ್ಲದ ಅರ್ಜಿಯನ್ನು ತಿರಸ್ಕರಿಸಿ, ಕಡತವನ್ನು ಮುಚ್ಚಲಾಗುವುದು.